ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 38

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಬುಧವಾರ: 14–01–2026

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626


## ಪ್ರಾಧ್ಯಾಪಕಿ ಅಂಜಲಿ ಉಲ್ಲೆಗೆ ಡಾಕ್ಟರೇಟ್ ಪ್ರದಾನ



**ಬೀದರ:ಜ.13:** ತಾಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಘೋಡಂಪಳ್ಳಿಯಲ್ಲಿ ಇಂಗ್ಲೀಷ ವಿಷಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಅಂಜಲಿ ಮಾಣಿಕ ಉಲ್ಲೆ ಅವರಿಗೆ ದ್ರಾವಿಡಿಯನ್ ವಿಶ್ವವಿದ್ಯಾಲಯ ಕುಪ್ಪಮ್ ಆಂಧ್ರಪ್ರದೇಶದಿಂದ ಡಾಕ್ಟರೇಟ್ ಪದವಿ ಪಡೆದುಕೊಂಡಿದ್ದಾರೆ. "ಫೆಮಿನೈನ್ ಕಾನ್ಸಿಯಸ್‌ನೆಸ್ ಇನ್ ದಿ ನೊವೆಲ್ಸ್ ಆಫ್ ಅನಿತಾ ದೇಸಾಯಿ ಎ ಸ್ಟಡಿ" ಎಂಬ ವಿಷಯದ ಮೇಲೆ ಮಂಡಿಸಿರುವ ಮಹಾಪ್ರಬಂಧಕ್ಕೆ ಡಾ. ಅಂಜಲಿ ಉಲ್ಲೆಗೆ ಡಾಕ್ಟರೇಟ್ ಲಭಿಸಿದೆ. ಹಿರಿಯ ಪ್ರಾಧ್ಯಾಪಕ ಡಾ. ಉಮಾಕಾಂತ ಎಸ್. ಪಾಟೀಲ ಅವರ ಮಾರ್ಗದರ್ಶನದಲ್ಲಿ ಈ ಪ್ರಬಂಧ ಮಂಡಿಸಲಾಗಿದ್ದು, ಕಾಲೇಜಿನ ಸಿಬ್ಬಂದಿ ವರ್ಗದವರು ಹಾಗೂ ಹಿತೈಷಿಗಳು, ಸ್ನೇಹಿತರು ಹಾಗೂ ಬಂಧು ಮಿತ್ರರು ಶುಭ ಹಾರೈಸಿದ್ದಾರೆ.

## ರಾಯಚೂರು ಉತ್ಸವ: ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತೊಂದು ಸುತ್ತಿನ ಸಿದ್ಧತಾ ಸಭೆ

ಧೈರ್ಯದ ದಾರಿ



**ರಾಯಚೂರು ಜ,13–** ಜನವರಿ 29, 30 ಹಾಗೂ 31ರಂದು ನಿಗದಿಯಾದ ರಾಯಚೂರು ಉತ್ಸವ ಆಚರಣಾ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾ ರಿಗಳಾದ ನಿತೀಶ್ ಕೆ. ಅವರ ಅಧ್ಯಕ್ಷತೆಯಲ್ಲಿ ಜನವರಿ 13ರಂದು ಎಡೆದೊರೆ ನಾಡು ರಾಯಚೂರು ಉತ್ಸವ–2026ರ ಮತ್ತೊಂದು ಸುತ್ತಿನ ಸಿದ್ಧತಾ ಸಭೆ ನಡೆಯಿತು.

ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಮೂರನೇ ಸುತ್ತಿನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿಗಳು, ಉತ್ಸವದ ಹಿನ್ನೆಲೆಯಲ್ಲಿ ಈಗಾಗಲೇ ಎಲ್ಲ ರೀತಿಯಲ್ಲಿ ಸಿದ್ದತೆಗಳು ನಡೆಯುತ್ತಿದ್ದು, ಇನ್ನಷ್ಟು ಚುರುಕುಗೊಳ್ಳಬೇಕು. ಮುಖ್ಯವಾಗಿ ಜನೋತ್ಸವ ರೀತಿಯಲ್ಲಿ ಉತ್ಸವ ನಡೆಸಲು ಜಿಲ್ಲಾಡಳಿತವು ಬದ್ಧವಾಗಿದೆ. ನಾವು ಸಹ ಉತ್ಸವದಲ್ಲಿ

ಭಾಗವಹಿಸುತ್ತೇವೆ. ನಮಗೂ ಉತ್ಸವದ ಕಾರ್ಯ ವಹಿಸಿ ಎಂದು ತಿಳಿಸುವ ಜಿಲ್ಲೆಯ ಎಲ್ಲ ಸಂಘ–ಸಂಸ್ಥೆಗಳ, ಗಣ್ಯರ, ನಾಗರಿಕರ, ಯುವಕರ, ನೌಕರರ ಅಭಿಲಾಷೆಯಂತೆ ಎಲ್ಲರ ಸಹಭಾಗಿತ್ವದೊಂದಿಗೆ ಉತ್ಸವ ನಡೆಯುವಂತೆ ಕಾರ್ಯಯೋಜನೆ ರೂಪಿಸಿ ಸಂಬಂಧಿಸಿದ ಆಯಾ ಸಮಿತಿಗಳಲ್ಲಿನ ಅಧ್ಯಕ್ಷರು ಮತ್ತು ಸದಸ್ಯರು ಕಾರ್ಯನುಷ್ಠಾನ ಗೊಳಿಸಬೇಕು ಎಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿನ ಕವಿಗಳು, ಲೇಖಕರು, ಚಿಂತಕರು ಮತ್ತು ಬುದ್ಧಿಜೀವಗಳ ಮತ್ತು ಜಾನಪದ ಸೇರಿದಂತೆ ಎಲ್ಲ ಬಗೆಯ ಕಲಾವಿದರಿಗೆ ಉತ್ಸವದಲ್ಲಿ ಅವಕಾಶ ಸಿಗಬೇಕು.

ಈ ಕಾರ್ಯವನ್ನು ಆಯಾ ಸಮಿತಿಯ ಸದಸ್ಯರು ಪಾರದರ್ಶಕವಾಗಿ ಮಾಡಬೇಕು. ಪುಸ್ತಕ ಓದುವ ಸಂಸ್ಕೃತಿಗೆ ಆದ್ಯತೆ ಸಿಗುವ ದಿಶೆಯಲ್ಲಿ ಪುಸ್ತಕ ಪ್ರದರ್ಶನ ಮಳಿಗೆ ನಿರ್ಮಾಣ ಸೇರಿದಂತೆ ನಾನಾ ಬಗೆಯ ಕಾರ್ಯಗಳ ಮೂಲಕ ಉತ್ಸವವು ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಳ್ಳಲು ಸೂಚನೆ ನೀಡಿದರು.

ಎಲ್ಲ ಅತಿಥಿ ಗಣ್ಯರಿಗೆ ಶಿಷ್ಠಾಚಾರದಂತೆ ಉತ್ಸವಕ್ಕೆ ಆಹ್ವಾನಿಸುವ ಕಾರ್ಯವಾಗಬೇಕು. ನಗರದ ರೈಲ್ವೆ ನಿಲ್ದಾಣ, ಜಿಲ್ಲೆಯ ಎಲ್ಲ ಬಸ್ ನಿಲ್ದಾಣಗಲ್ಲಿ ಮತ್ತು ಇತರೇ ಸ್ಥಳಗಳಲ್ಲಿ ಪೋಸ್ಟರ್ ಮತ್ತು ಬ್ಯಾನರ್ ಅಳವಡಿಸಿ ಪ್ರಚಾರ ಕಾರ್ಯಕ್ಕೆ ಒತ್ತು ಕೊಡಬೇಕು.

ಹೊರಗಡೆಯಿಂದ ಉತ್ಸವಕ್ಕೆ ಆಗಮಿಸುವ ಕಲಾವಿದರು ಮತ್ತು ಇನ್ನಿತರರಿಗೆ ಸರಿಯಾದ ರೀತಿಯಲ್ಲಿ ವಸತಿ ಗೃಹಗಳ ವ್ಯವಸ್ಥೆ ಮಾಡಬೇಕು ಎಂದು ಸೂಚನೆ ನೀಡಿದರು.

ಉತ್ಸವದಲ್ಲಿ ಕೃಷಿ, ಕರಕುಶಲ, ಫಲಪುಷ್ಪ, ಆಹಾರ ಮೇಳ, ಮತ್ಸ್ಯ ಮೇಳ, ಚಿತ್ರಕಲೆ ಪ್ರದರ್ಶನ ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ಪ್ರದರ್ಶನಗಳು ಅಚ್ಚುಕಟ್ಟಾಗಿ ನಡೆಯಬೇಕು. ರೈತರನ್ನು ಆಕರ್ಷಿಸುವ ಕೃಷಿ ಉತ್ಸವ ಆಯೋಜಿಸಬೇಕು ಎಂದು ಸೂಚನೆ ನೀಡಿದರು.

ರಾಯಚೂರು ಉತ್ಸವದಲ್ಲಿ ನಾನಾ ಸ್ಥಳಗಳ ಮಾಹಿತಿ ಜನತೆಗೆ ಸಿಗುವ ನಿಟ್ಟಿನಲ್ಲಿ ಅಲ್ಲಲ್ಲಿ ಸೂಚನಾ ಫಲಕಗಳನ್ನು ಹಾಕಬೇಕು. ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್ ಹಾಗೂ ಇತರೆ ಸ್ವಯಂ ಸೇವಕ ಸಂಘಗಳ ಸಹಾಯ– 2ನೇಪುಟಕ್ಕೆ►

## ವಸತಿ ವಿನ್ಯಾಸ ಪ್ರದೇಶದಲ್ಲಿ ಒಳ ಸಂಪರ್ಕ ರಸ್ತೆ ನಿರ್ಮಾಣಕ್ಕಾಗಿ ಮನವಿ



ಧೈರ್ಯದ ದಾರಿ

**ಮಾನ್ವಿ,ಜ.13–** ಪಟ್ಟಣದ ಪುರಸಭೆ ಆವರಣದಲ್ಲಿ ಕನ್ನಡ ಸೇನೆ ಕರ್ನಾಟಕ ತಾ,ಘಟಕ ವತಿಯಿಂದ ಪುರಸಭೆ ಮುಖ್ಯಾಧಿಕಾರಿಗಳಿಗೆ ಆರೋಗ್ಯ ನಿರೀಕ್ಷಕರಾದ ಮಹೇಶ್ ಕುಮಾರ ರವರ ಮೂಲಕ ಮನವಿ ಸಲ್ಲಿಸಿ ತಾ.ಅಧ್ಯಕ್ಷರಾದ ಬಸವರಾಜ ಮೈಲಾರಿ ಮಾತನಾಡಿ ಮಾನ್ವಿ ಪಟ್ಟಣದ ವಾರ್ಡ್ ನಂ.2 ರಲ್ಲಿ ಬರುವ ನೇತಾಜಿ ಶಾಲೆಯ ಹಿಂದುಗಡೆ ನೂತನವಾಗಿ ರಚಿಸಲಾಗಿರುವ ವಸತಿ ವಿನ್ಯಾಸ ಪ್ರದೇಶದಲ್ಲಿ ಜನರ ಸಂಚಾರಕ್ಕೆ ಅಗತ್ಯವಾಗಿರುವ ಲಿಂಕ್ ರಸ್ತೆಗಳು ಇಲ್ಲದೆ ಇರುವುದರಿಂದ ಇಲ್ಲಿನ ನಿವಾಸಿಗಳು ಮುಖ್ಯ ರಸ್ತೆಗೆ ಸಾಗುವುದಕ್ಕೆ ಸುತ್ತಿಬಳಸಿ ಕೊಂಡು ಹೋಗಾಬೇಕಾಗಿರು ವುದರಿಂದ ಇಲ್ಲಿನ ನಿವಾಸಿಗಳಿಗೆ ತೀವ್ರ ತೊಂದರೆಯಾಗುತ್ತಿದೆ ರಸ್ತೆಗಳನ್ನು ಹಾಕಬೇಕಾದ ಸ್ಥಳದಲ್ಲಿ ಉದ್ಯಾನ ವನ್ನು ನಿರ್ಮಾಣ ಮಾಡಲಾಗುತ್ತಿದೆ ಕೂಡಲೇ ಪುರಸಭೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಇಲ್ಲಿನ ನಿವಾಸಿಗಳಿಗೆ ಒಳ ರಸ್ತೆಗಳನ್ನು ಮಾಡಿಕೊಡು ವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ದರು.ತಾ.ಪ್ರ. ಕಾರ್ಯದರ್ಶಿ ಶಿವಾನಂದ ನಾಯಕ , ನ.ಘಟಕದ ಅಧ್ಯಕ್ಷರಾದ ಶೇಖ್ ಮುಸ್ತಫ, ಶರಣಬಸವ, ಭೀಮೇಶ, ಶಿವು ಬಾಲನಗರ, ಪ್ರಭು,ಸಿದ್ದಪ್ಪನಾಯಕ, ಸೇರಿದಂತೆ ಇನ್ನಿತರರು ಇದ್ದರು.

## ಶಾಲೆಯ ಅಂಗಳದಲ್ಲೇ ತಾರಾಲಯ ಕಾರ್ಯಕ್ರಮ



ಧೈರ್ಯದ ದಾರಿ

**ಮಾನ್ವಿ,ಜ.13–** ಪಟ್ಟಣದ ನೇತಾಜಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಂಚಾರಿ ಡಿಜಿಟಲ್ ತಾರಾಲಯ ವತಿಯಿಂದ ನಡೆದ ಶಾಲೆಯ ಅಂಗಳದಲ್ಲೇ ತಾರಾಲಯ ಕಾರ್ಯಕ್ರಮವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಜಿಲ್ಲಾ ಸಂಚಲಕರಾದ ಗಣೇಶ ಬಗೋಡಿ ಚಾಲನೆ ನೀಡಿ ಮಾತನಾಡಿ ಜಿಲ್ಲೆಯ ವಿದ್ಯಾರ್ಥಿಗಳಿಗೆ ಭೌಗೋಳಿಕ ವಿಜ್ಞಾನ ಹಾಗೂ ಖಗೋಳ ವಿಜ್ಞಾನ ,ತಾರಾಲಯ ಕುರಿತು ,ಮನಮುಟ್ಟುವಂತೆ ಪರಿಣಮಾಕಾರಿಯಾಗಿ ತಿಳಿಸುವುದಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ,ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೋಸೈಟಿ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಸಂಚಾರಿ ಡಿಜಿಟಲ್ ತಾರಾಲಯ ಪ್ರದರ್ಶನ ವ್ಯವಸ್ಥೆ ಮಾಡಲಾಗಿದ್ದು ಶಾಲಾ ಮಕ್ಕಳು ತಾರೆ ಜಮೀನ್ ಪರ್ ಡಿಜಿಟಲ್ ಸಂಚಾರಿ ಸೌರವ್ಯೂಹ ಮಂದಿರದಲ್ಲಿ ವಿದ್ಯಾರ್ಥಿಗಳಿಗೆ ಸೌರವ್ಯೂಹದ ಕುರಿತು ದೃಶ್ಯಗಳ ಮೂಲಕ ಮಾಹಿತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಮಾನ್ವಿ ಪಟ್ಟಣದ ವಿವಿಧ ಶಾಲೆಗಳ ವಿದ್ಯಾರ್ಥಿಗಳು ತಾರೆ ಜಮೀನ್ ಪರ್ ಡಿಜಿಟಲ್ ಸಂಚಾರಿ ಸೌರವ್ಯೂಹ ಮಂದಿರವನ್ನು ವಿಕ್ಷಿಸಿದರು.

ಕಾರ್ಯಕ್ರಮದಲ್ಲಿ ನೇತಾಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಕೆ.ಈ. ನರಸಿಂಹ, ಕಾರ್ಯದರ್ಶಿಗಳಾದ ವಿಜಯಲಕ್ಷ್ಮೀ, ಸಹಕಾರ್ಯ ದರ್ಶಿ ರವಿವರ್ಮ, ಜಿಲ್ಲಾ ಕಸಾಪ ಗೌ.ಕಾರ್ಯದರ್ಶಿ ತಾಯಪ್ಪ ಬಿ.ಹೊಸೂರು, ತಾ.ಖಾ.ಶಿ.ಸಂ.ಒಕ್ಕೂಟದ ಪ್ರ.ಕಾರ್ಯದರ್ಶಿ ರಾಜು ತಾಳಿಕೋಟೆ,ಪಕ್ಷಿಪ್ರೇಮಿ ಸಲ್ಲಾವುದಿನ್ನ್ ಸೇರಿದಂತೆ ವಿವಿಧ ಶಾಲೆಗಳ ಮುಖ್ಯಗುರುಗಳು ,ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

## ಉಡಮಗಲ್ ಖಾನಪುರ ಸರ್ಕಾರಿ ಶಾಲೆಯಲ್ಲಿ ವಿವೇಕಾನಂದರ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ ಸಂಭ್ರಮ



ಧೈರ್ಯದ ದಾರಿ

**ರಾಯಚೂರು,ಕ.13–** ಭಾರತದ ಭವ್ಯ ಇತಿಹಾಸವನ್ನು ನಾವು ತಿರುಗಿ ನೋಡಿದಾಗ ಹಲವಾರು ಮಹನೀಯರ ಸಾಧನೆ ಮತ್ತು ಕಾಯಕವು ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿ ಉಳಿದಿವೆ. ಅಂತಹ ಮಹಾನ್ ಪುರುಷರಲ್ಲಿ ಒಬ್ಬರಾದ ಸ್ವಾಮಿ ವಿವೇಕಾನಂದರು ನಮ್ಮ ದೇಶದ ಸಂಸ್ಕೃತಿ ಮತ್ತು ನಾಡಿನ ಹಿರಿಮೆಯನ್ನು ವಿದೇಶಗಳಿಗೆ ಪರಿಚಯಿಸಿದ ಆದರ್ಶ ಮೂರ್ತಿಯಾಗಿದ್ದಾರೆ ಎಂದು ರಾಯಚೂರು ತಾಲೂಕಿನ ಉಡಮಗಲ್ ಖಾನಪುರ ಸರ್ಕಾರಿ ಪ್ರೌಢಶಾಲೆಯ ಕನ್ನಡ ಕಲಾ ಶಿಕ್ಷಕರು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿಗಳಾದ ಡಾ. ದಂಡಪ್ಪ ಬಿರಾದಾರ ಅವರು ಅಭಿಪ್ರಾಯಪಟ್ಟರು.

ಶಾಲೆಯಲ್ಲಿ ದಿನಾಂಕ 12–01–2026 ರಂದು ಹಮ್ಮಿಕೊಳ್ಳಲಾಗಿದ್ದ ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ವಿವೇಕಾನಂದರು 1863 ರಲ್ಲಿ ಭುವನೇಶ್ವರಿ ದೇವಿ ಮತ್ತು ವಿಶ್ವನಾಥ ದತ್ತರ ಮಗನಾಗಿ ಜನಿಸಿದರು. ಬಾಲ್ಯದಲ್ಲಿ ನರೇಂದ್ರ ಎಂಬ ಹೆಸರಿನಿಂದ ತುಂಟಾಟದ ಸ್ವಭಾವ ಹೊಂದಿದ್ದ ಇವರು, ಮುಂದೆ ರಾಮಕೃಷ್ಣ ಪರಮಹಂಸರ ಮಾರ್ಗದರ್ಶನ ಪಡೆದು ಆಧ್ಯಾತ್ಮಿಕ ಪಥದಲ್ಲಿ ಸಾಗಿದರು. ಚಿಕಾಗೋ ನಗರದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ 'ಅಮೇರಿಕದ ಸಹೋದರ ಮತ್ತು ಸಹೋದರಿಯರೇ' ಎಂದು ಸಂಬೋಧಿಸುವ ಮೂಲಕ ಇಡೀ ಸಭೆಯ ಗೌರವಕ್ಕೆ ಪಾತ್ರರಾದರು. ಆ ಒಂದು ಶಬ್ದಕ್ಕೆ ಸಭಿಕರು ಚಪ್ಪಾಳೆ ತಟ್ಟುವ ಮೂಲಕ ಭಾರತೀಯ ಸಂಸ್ಕೃತಿಗೆ ಮನ್ನಣೆ ನೀಡಿದರು ಎಂದು ಬಿರಾದಾರ ಅವರು ಸ್ಮರಿಸಿದರು. ಮುಂದುವರಿದು ಮಾತನಾಡಿದ ಅವರು, ಒತ್ತಾಯದ ಮೂಲಕ ಯಾವುದೇ ಧರ್ಮ ಅಥವಾ ಜಾತಿಯನ್ನು ಜನರಲ್ಲಿ ಬಿತ್ತಬಾರದು. ಸನ್ಯಾಸಿಯಾದವನು ಜಗತ್ತಿನ ಶಾಂತಿಯನ್ನು ಬಯಸುತ್ತಾನೆ. ವಿವಿಧ ಭಾಗಗಳಲ್ಲಿ ಹುಟ್ಟಿದ ನದಿಗಳು ಅಂತಿಮವಾಗಿ ಸಮುದ್ರವನ್ನು ಸೇರುವಂತೆ, ವಿವಿಧ ಧರ್ಮಗಳಲ್ಲಿ ಜನಿಸಿದವರು ಕೊನೆಗೆ ಮಣ್ಣನ್ನೇ ಸೇರುತ್ತಾರೆ ಎಂಬ ಸತ್ಯವನ್ನು ಅರ್ಥಮಾಡಿಕೊಂಡಾಗ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯ ಎಂದು ವಿವೇಕಾನಂದರ ಸಂದೇಶಗಳನ್ನು ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ಶಾಲಾ ಮುಖ್ಯಗುರುಗಳಾದ ವೀರೇಶ್ ಅಂಗಡಿ ಮತ್ತು ಶಿಕ್ಷಕಿ ಶ್ರೀಮತಿ ಸರಸ್ವತಿ ಅವರು ಮಾತನಾಡಿ, ವಿವೇಕಾನಂದರ ವಿಚಾರಗಳು ಮತ್ತು ಅವರ ಸಾಧನೆಗಳನ್ನು ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದ ಆರಂಭದಲ್ಲಿ ಕುಮಾರಿ ಗೀತಾ ಸ್ವಾಗತಿಸಿದರು ಮತ್ತು ಕೊನೆಯಲ್ಲಿ ಕುಮಾರಿ ದಿವ್ಯ ವಂದನಾರ್ಪಣೆ ಮಾಡಿದರು. ನೀಲಕಂಠ ಅವರು ಕಾರ್ಯಕ್ರಮದ ಸಂಘಟನೆಗೆ ಸಹಕರಿಸಿದರು. ವೇದಿಕೆಯ ಮೇಲೆ ಶಿಕ್ಷಕ ವೃಂದದವರಾದ ಪಾಂಡುರಂಗ ದೇಸಾಯಿ, ವೀಣಾ ಕುಲಕರ್ಣಿ, ಅನಿತಾ ಎನ್., ಮತ್ತು ಶಿವಲೀಲಾ ಸೇರಿದಂತೆ ವಿವಿಧ ತರಗತಿಗಳ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಮದ್ಲಾಪುರು ಪೌಢಶಾಲೆಯಲ್ಲಿ ಉಚಿತ ಯೋಗ ಶಿಬಿರ



ಧೈರ್ಯದ ದಾರಿ

**ಮಾನ್ವಿ,ಜ.13–** ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಪಟ್ಟಣದ ಮದ್ಲಾಪುರು ಪೌಢಶಾಲೆಯಲ್ಲಿ ಶಾಲಾ ಮಕ್ಕಳಿಗಾಗಿ ಉಚಿತ ಯೋಗ ಶಿಬಿರವನ್ನು ಆಯೋಜಿಸಲಾಯಿತು. ಈ ಶಿಬಿರವನ್ನು ಯೋಗ ಸನ್ನಿಧಿ ಜ್ಞಾನ ವಿದ್ಯಾ ಪೀಠ ಟ್ರಸ್ಟ್, ಮಾನ್ವಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದು, ಯೋಗ ಗುರು ಅನ್ನದಾನಯ್ಯ ಅವರು ಶಾಲಾ ಮಕ್ಕಳಿಗೆ ಯೋಗಾಭ್ಯಾಸವನ್ನು ತರಬೇತಿ ರೂಪದಲ್ಲಿ ತಿಳಿಸಿಕೊಟ್ಟರು.

ಶಿಬಿರದಲ್ಲಿ ತ್ರಿಕೋಣಾಸನ, ಪದ್ಮಾಸನ, ಗೋಮುಖಾಸನ, ಪಾದಾಹಸ್ತಾಸನ ಸೇರಿದಂತೆ ವಿವಿಧ ಯೋಗಾಸನಗಳು, ಪ್ರಾಣಾಯಾಮಗಳು ಹಾಗೂ ಮುದ್ರೆಗಳ ಅಭ್ಯಾಸವನ್ನು ಮಕ್ಕಳಿಗೆ ಪ್ರಾಯೋಗಿಕವಾಗಿ ಹೇಳಿಕೊಡಲಾಯಿತು. ನಂತರ ಧ್ಯಾನಾಭ್ಯಾಸ ನಡೆಸಿ ಶಿಬಿರವನ್ನು ಸಮರ್ಪಕವಾಗಿ ಮುಕ್ತಾಯಗೊಳಿಸಲಾಯಿತು. ಈ ಸಂದರ್ಭದಲ್ಲಿ ರಾಯಚೂರಿನ ಡಯಟ್ ಶಿಕ್ಷಣಾಧಿಕಾರಿಗಳಾದ ಜೀವನ್ ಸಾಬ್ ಮಾತನಾಡಿ, ರಾಯಚೂರು ಜಿಲ್ಲೆದ್ಯಂತ ಸರಕಾರಿ ಶಾಲಾ ಮಕ್ಕಳಿಗಾಗಿ ನಿರಂತರವಾಗಿ ಯೋಗ ಶಿಬಿರಗಳನ್ನು ಆಯೋಜಿಸುತ್ತಿರುವ ಯೋಗ ಗುರು ಅನ್ನದಾನಯ್ಯ ಅವರ ಸೇವೆ ಶ್ಲಾಘನೀಯವಾಗಿದ್ದು, ಇಂತಹ ಯೋಗ ಶಿಬಿರಗಳು ಮಕ್ಕಳ ಶೈಕ್ಷಣಿಕ ಪ್ರಗತಿ ಹಾಗೂ ಉತ್ತಮ ಫಲಿತಾಂಶಕ್ಕೆ ಸಹಕಾರಿಯಾಗುತ್ತವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಶಾಲೆಯ ಮುಖ್ಯೋಪಾಧ್ಯಾಯರಾದ ನಾಗಪ್ಪ ಮಾತನಾಡಿ, ನಿಯಮಿತ ಯೋಗಾಭ್ಯಾಸದಿಂದ ಮಕ್ಕಳ ನರನಾಡಿಗಳಲ್ಲಿ ರಕ್ತಸಂಚಾರ ಸುಧಾರಿಸಿ ದೇಹದ ಆರೋಗ್ಯ ಹೆಚ್ಚುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಸಹ ಶಿಕ್ಷಕರಾದ ದ್ಯಾವಪ್ಪ, ಶ್ರೀಕಾಂತ್, ಸಂದೀಪ್, ಮಾಜೀದ್ ಅಲಿ ಖಾನ್, ತಸ್ಲೀಮ್ ಸಲೋಮಿ ಸೇರಿದಂತೆ ಶಾಲಾ ಮಕ್ಕಳು ಭಾಗವಹಿಸಿ ಯೋಗ ಶಿಬಿರವನ್ನು ಯಶಸ್ವಿಗೊಳಿಸಿದರು.

## ಮುಧೋಳ ಗ್ರಾಮದ ದಂಪತಿಗಳಿಗೆ ಆದರ್ಶ ಪ್ರಶಸ್ತಿ

**ಕಮಲನಗರ :ಜ.13:** ಕರ್ನಾಟಕ ಶಿಕ್ಷಕರ ಸಂಘಗಳ ಪರಿಷತ್ತು ಧಾರವಾಡ ಹಾಗೂ ಕಲ್ಯಾಣ ಕರ್ನಾಟಕ ಪ್ರೌಢಶಾಲಾ ಶಿಕ್ಷಕರ ಸಂಘ ರೀ ಬೀದರ ಸಂಯುಕ್ತಾಶ್ರಯದಲ್ಲಿ ಮಾತೋಶ್ರೀ ರಮಾಬಾಯಿ ಅಂಬೇಡ್ಕರ ಅವರ ಜಯಂತಿ ಉತ್ಸವ ನಿಮಿತ್ಯವಾಗಿ ರಾಜ್ಯಮಟ್ಟದ ಆದರ್ಶ ದಂಪತಿ ಪ್ರಶಸ್ತಿ ಬೀದರ ಜಿಲ್ಲೆಯ ಕಮಲನಗರ ತಾಲೂಕಿನ ಮುಧೋಳ (ಬಿ)ಗ್ರಾಮದ ಶರಣ ಜೀವಿಗಳಾದ ಶರಣೆ ಮಹಾದೇವಿ ಶರಣ ನಾಗಯ್ಯ ಸ್ವಾಮಿಯವರಿಗೆ ದಿನಾಂಕ 11.1.2026 ರಂದು ರವಿವಾರ ಸಂಜೆ 6 ಗಂಟೆಗೆ ಸರ್ಕಾರಿ ನೌಕರರ ಸಮುದಾಯ ಭವನ ಪ್ರತಾಪ ನಗರ ಬೀದರ ನಲ್ಲಿ ನೆರವೇರಿತು.

ಈ ಸಂದರ್ಭದಲ್ಲಿ ದಿವ್ಯ ಸಾನಿಧ್ಯ ವಹಿಸಿರುವ ಪೂಜ್ಯ ಸಿದ್ರಾಮ ಬೆಲ್ದಾಳ ಶರಣರ ಹಾಗೂ ಪರಮಪೂಜ್ಯ ಬಾಲ ಯೋಗಿ ಸುವರ್ಣ ಮಾತಾಜಿ ಅವರ ದಿವ್ಯ ನೇತೃತ್ವದಲ್ಲಿ ಮತ್ತು ಕರ್ನಾಟಕ ಶಿಕ್ಷಕರ ಸಂಘ ಪರಿಷತ್ತು ಧಾರವಾಡ ಹಾಗೂ ಶ್ರೀ ಪಾಂಡುರಂಗ ಬೆಲ್ದಾರ ಸಂಸ್ಥಾಪಕ ಅಧ್ಯಕ್ಷರು ಕಲ್ಯಾಣ ಕರ್ನಾಟಕ ಪ್ರೌಢಶಾಲಾ ಶಿಕ್ಷಕರ ಸಂಘ ಬೀದರ ಸಮಸ್ತ ಪದಾಧಿಕಾರಿಗಳ ಸಮ್ಮುಖದಲ್ಲಿ ಶರಣೆ ಮಹಾದೇವಿ ಶರಣ ನಾಗಯ್ಯ ಸ್ವಾಮಿ ಯವರಿಗೆ ರಾಜ್ಯಮಟ್ಟದ ಆದರ್ಶ ದಂಪತಿ ಪ್ರಶಸ್ತಿ ಪುರಸ್ಕಾರ ನೆರವೇರಿತು. ಪ್ರಶಸ್ತಿ ಸ್ವೀಕರಿಸಿ ಗುರು ಹಿರಿಯರ ಕೃಪೆಯಿಂದ 1994 ರಿಂದ ಇಲ್ಲಿಯವರೆಗೆ ಸುಮಾರು 32 ವರ್ಷಗಳ ಕಾಲ ಸತಿಪತಿಗಳಾಗಿ ಶರಣ ಜೀವನ ಪ್ರಾರಂಭಿಸಿ ಅನೇಕ ಕಷ್ಟ ಕಾರ್ಪಣ್ಯಗಳು ಸುಖ ದುಃಖಗಳೊಂದಿಗೆ ಮಕ್ಕಳು ಸಂಬಂಧಿಗಳೊಂದಿಗೆ ಸಮುದಾಯ



ಸಮಾಜದೊಂದಿಗೆ ಒಳನಾಡಿಗಳಾಗಿ ಜೀವನ ನಡೆಸುತ್ತಿರುವುದು ಹಾಗೂ ಶಿಕ್ಷಣ ಸಂಸ್ಕೃತಿ ಸಾಮಾಜಿಕ ಧಾರ್ಮಿಕ ಸೇವೆಯಲ್ಲಿ ಸದಾ ನಾನು ಮಾಡಿದ ಸೇವೆಯನ್ನು ಮನಗಂಡು ನನಗೆ ಈ ಆದರ್ಶ ದಂಪತಿ ಪ್ರಶಸ್ತಿ ನೀಡಿರುವುದು ಸಂತೋಷದ ವಿಷಯ ಇದು ಸಮಾಜದ ಪ್ರಶಸ್ತಿ ಸಮಾಜಕ್ಕೆ ಸಲ್ಲಬೇಕು ಹಾಗೂ ನನಗೆ ಮುಂದಿನ ದಿನಗಳಲ್ಲಿ ಸಾಮಾಜಿ ಒಳ್ಳೆಯ ಕೆಲಸವನ್ನು ಮಾಡಲು ಈ ಪ್ರಶಸ್ತಿ ಪ್ರೋತ್ಸಾಹ ದೊರಕಿರುವುದು ತುಂಬಾ ಸಂತೋಷದ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

## ನಾಯಿ ಕಚ್ಚಿದರೆ ದಂಡ: ಸುಪ್ರೀಂ

**ನವದೆಹಲಿ, ಜ.13–** ಬೀದಿ ನಾಯಿಗಳಿಂದ ಕಚ್ಚಿ ಜನರು ಸಾವನ್ನಪ್ಪಿದರೆ ಪ್ರತಿಯೊಂದು ಸಾವಿಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಹೊಣೆಗಾರರನ್ನಾಗಿ ಮಾಡಿ ಬಾರಿ ಪ್ರಮಾಣದದಲ್ಲಿ ದಂಡ ಹಾಕಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿರುವ ಸುಪ್ರೀಂಕೋರ್ಟ್, ನಾಯಿಗಳಿಗೆ ಆಹಾರ ನೀಡುವವರನ್ನು ದಾಳಿಗೆ ಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆ ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಬೀದಿ ನಾಯಿಗಳ ಪ್ರಕರಣದ ವಿಚಾರಣೆ ಕುರಿತು ಇದು ವಿಚಾರಣೆ ನಡೆಸಿದ , ಕಚ್ಚಿ ಸಾವನ್ನಪ್ಪುವ ಪ್ರತೀ ಸಾವಿಗೂ ರಾಜ್ಯಗಳು ಮತ್ತು ಕೇಂದ್ರ ಸರ್ಕಾರಕ್ಕೆ ಭಾರಿ ಪ್ರಮಾಣದಲ್ಲಿ ದಂಡ ಕಟ್ಟಬೇಕಾಗುತ್ತದೆ ನಾಯಿಯ ಕಡಿತ ಜೀವಿತಾವಧಿಯ ಪರಿಣಾಮ ಬೀರುತ್ತದೆ ಎಂದು ಪೀಠ ಹೇಳಿದೆ.ನಾಯಿ ಕಡಿತ ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್‌ವಿ ಅಂಜಾರಿಯಾ ಅವರನ್ನೊಳಗೊಂಡ ಪೀಠ ಹೇಳಿದೆ.

ಪ್ರತಿ ನಾಯಿ ನಿಯಂತ್ರಿಸಲು ಕಡಿತಕ್ಕೆ, ಪ್ರತಿ ಸಾವಿಗೆ, ಅಗತ್ಯ ವ್ಯವಸ್ಥೆಗಳನ್ನು ಮಾಡದ ರಾಜ್ಯಗಳಿಗೆ ಮತ್ತು ನಾಯಿಗಳಿಗೆ ಆಹಾರ ನೀಡುವವರಿಗೂ ಹೊಣೆಗಾರರನ್ನಾಗಿ ಮಾಡಬೇಕು,ನಾಯಿ ಬಗ್ಗೆ ಪ್ರೀತಿ ಇದ್ದರೆ ಅವುಗಳನ್ನು ನಿಮ್ಮ ಮನೆಗೆ ಕರೆದೊಯ್ಯಿರಿ, ಅಲ್ಲಿ ಇಟ್ಟುಕೊಳ್ಳಿ. ಅವುಗಳನ್ನು ಏಕೆ ಸುತ್ತಾಡಲು, ಕಚ್ಚಲು, ಬೆನ್ನಟ್ಟಲು ಬಿಡಬೇಕು ಎಂದು ನಾಯಿ ಕಡಿತದ ಪರಿಣಾಮ ಜೀವಿತಾವಧಿಯವರೆಗೆ ಇರುತ್ತದೆ" ಎಂದು ನ್ಯಾಯಪೀಠ ಸರ್ಕಾರಗಳಿಗೆ ಚಾಟಿ ಬೀಸಿದೆ.

ಬೀದಿ ನಾಯಿ ಹಾವಳಿ ಮತ್ತು ಕಡಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ರಾಜ್ಯ ಸರ್ಕಾರಗಳನ್ನು ತರಾಟೆಗೆ ತೆಗೆದುಕೊಂಡ ಸುಪ್ರೀಂ ಕೋರ್ಟ್, ಎಬಿಸಿ ನಿಯಮಗಳನ್ನು ಜಾರಿಗೆ ತರುವಲ್ಲಿ ರಾಜ್ಯಗಳು ವಿಫಲವಾಗಿದೆ" ಎಂದು ಹೇಳಿದೆ

ಬೀದಿ ನಾಯಿ ಹಾವಳಿ ನಿಯಂತ್ರಣ ಮಾಡಲು ವಿಫಲವಾಗುವ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳನ್ನು ತರಾಟೆಗೆ ತೆಗೆದುಕೊಂಡಿದ್ದು ಈ ವಿಷಯವು ಶಾಶ್ವತವಾಗಿ ಮುಂದವರೆದಿದೆ. 1950 ರ ದಶಕದಿಂದಲೂ ಸಂಸತ್ತು ಇದನ್ನು ಪರಿಶೀಲಿಸುತ್ತಿದೆ ಎಂದು ನೀವೇ ಹೇಳಿದ್ದೀರಿ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದಾಗಿ ಈ ಸಮಸ್ಯೆ 1000 ಪಟ್ಟು ಹೆಚ್ಚಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಡೆಯಿಂದ ಸಂಪೂರ್ಣ



ವೈಫಲ್ಯ ಎಂದು ನ್ಯಾಯಪೀಠ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ತರಾಟೆಗೆ ತೆಗೆದುಕೊಂಡಿದೆ.

ನಾಯಿ ಕಡಿತದಿಂದ ಪ್ರಾಣ ಕಳೆದುಕೊಂಡ ಪ್ರತಿಯೊಬ್ಬ ಪುರುಷ, ಮಹಿಳೆ ಮತ್ತು ಮಗುವಿಗೆ ಹೊಣೆಗಾರರಾದ ಸರ್ಕಾರಕ್ಕೆ ಭಾರಿ ದಂಡ ವಿಧಿಸುತ್ತೇವೆ" ಎಂದು ಪೀಠ ತಿಳಿಸಿದೆ.

ಕಳೆದ ವಾರ ಮೂರು ಬಾರಿ ತೀವ್ರ ಚರ್ಚೆಯ ನಂತರ, ವಿವಾದಾತ್ಮಕ ವಿಷಯದ ವಿಚಾರಣೆ ಈ ವಾರ ಪುನರಾರಂಭವಾಯಿತು. ಎಲ್ಲಾ ಬೀದಿ ನಾಯಿಗಳನ್ನು ನಿಯಂತ್ರಿಸಬೇಕು ಎಂದು ಅವರು ಹೇಳುತ್ತಿಲ್ಲ ಮತ್ತು ನಿಯಮಗಳನ್ನು ಸರಿಯಾಗಿ ಅನುಷ್ಠಾನಗೊಳ್ಳಬೇಕು ಎಂದು ಹೇಳಿದೆ.

1957 ರಲ್ಲಿ ಏನಾಯಿತು ಎಂಬುದನ್ನು ಜಾರಿಗೆ ತರಲು ಒಕ್ಕೂಟ, ರಾಜ್ಯ ಅಧಿಕಾರಿಗಳು ಮತ್ತು ಇತರ ಸಂಸ್ಥೆಗಳನ್ನು ತರಾಟೆಗೆ ತೆಗೆದುಕೊಳ್ಳಲು ಮತ್ತು ಆದೇಶ ರವಾನಿಸಲು ನಮಗೆ ಅವಕಾಶ ನೀಡಿ. ರಾಜ್ಯಗಳು ಮತ್ತು ಒಕ್ಕೂಟದೊಂದಿಗೆ ಅರ್ಧ ದಿನ ಕಳೆಯಬೇಕಾಗಿದೆ. ಅವರಿಗೆ ಕ್ರಿಯಾ ಯೋಜನೆ ಇದೆಯೇ ಅಥವಾ ಇಲ್ಲವೇ ಎಂದು ನೋಡಲು. ಸಮಸ್ಯೆಯು ಸಾವಿರ ಪಟ್ಟು ಹೆಚ್ಚು ಎಂದು ನ್ಯಾಯಪೀಠ ಅಸಮಾಧಾನ ಹೊರಹಾಕಿದೆ.

ನಮಗೆ ಶಾಸನಬದ್ಧ ನಿಬಂಧನೆಗಳ ಅನುಷ್ಠಾನ ಮಾತ್ರ ಬೇಕು. ಅದನ್ನು ಮಾಡಲು ನಮಗೆ ಅವಕಾಶ ನೀಡಿ. ನಮಗೆ ಕೆಲಸ ಮಾಡಲು ಅವಕಾಶ ನೀಡಿ."ನಮಗೆ ಮುಂದುವರಿಯಲು ಅವಕಾಶ ನೀಡಿ. ಅದೇ ವಿಷಯಗಳು ಮತ್ತೆ ಮತ್ತೆ ಬರುತ್ತಿವೆ. ಇದು ನ್ಯಾಯಾಲಯದ ವಿಚಾರಣೆಗಿಂತ ಸಾರ್ವಜನಿಕ ವೇದಿಕೆಯಾಗಿದೆ" ಎಂದು ಸುಪ್ರೀಂ ಕೋರ್ಟ್ ಹೇಳಿದೆ.

## ರಾಷ್ಟ್ರೀಯ ಯುವ ದಿನಾಚರಣೆ

**ಬೀದರ:ಜ.13:** ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ (FPAI) , ಬೀದರ ಶಾಖೆಯ ವತಿಯಿಂದ ಬೀದರನ ಶ್ರೀ ಮಡಿವಾಳೇಶ್ವರ ಪ್ರೌಢಶಾಲೆಯಲ್ಲಿ ಸ್ವಾಮಿ ವಿವೇಕಾನಂದರ ಜಯಂತೋತ್ಸವದ ಅಂಗವಾಗಿ "ರಾಷ್ಟ್ರೀಯ ಯುವ ದಿನಾಚರಣೆ" ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದ FPAI ಸಂಸ್ಥೆಯ ಕಾರ್ಯಕಾರಿಣಿ ಸಭೆಯ ಸದಸ್ಯರು ಹಾಗೂ ನೌಬಾದನ ಸಹಾರ್ದಾ ತರಬೇತಿ ಕೇಂದ್ರದ ನಿರ್ದೇಶಕರಾದ ಶ್ರೀ ಸುಬ್ರಮಣ್ಯ ಪ್ರಭು ಇವರು ಯುವ ದಿನಾಚರಣೆಯ ಅಂಗವಾಗಿ ಸ್ವಾಮಿ ವಿವೇಕಾನಂದರ ಜೀವನದ ನಡೆ–ನುಡಿ ಕುರಿತು ತಿಳಿಸಿ, "ಇಂದಿನ ಯುವ ಜನಾಂಗ ತಮ್ಮ ಜೀವನದಲ್ಲಿ ಸ್ವಾಮಿ ವಿವೇಕಾನಂದರ ತತ್ವಗಳನ್ನು, ಆದರ್ಶಗಳನ್ನು ಮಾದರಿಯಾಗಿಟ್ಟುಕೊಂಡು, ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು, ಸ್ವಾಮಿ ವಿವೇಕಾನಂದರ ನುಡಿಯ ಂತೆ ಏಳಿ, ಏದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ, ನಿಮ್ಮಲ್ಲಿ ಆತ್ಮಸ್ಥೈರ್ಯ ಬೆಳಸಿಕೊಳ್ಳಿ, ಶಿಕ್ಷಣವನ್ನೇ ಬಲಿಷ್ಟ ಶಕ್ತಿಯಾಗಿ ಬಳಸಿಕೊಂಡು ನಿಮ್ಮ ವ್ಯಕ್ತಿತ್ವವನ್ನು ಬೆಳಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಈಕಂಖ ಸಂಸ್ಥೆಯ ಶಾಖಾ ವ್ಯವಸ್ಥಾಪಕರಾದ ಶ್ರೀನಿವಾಸ ಬಿರಾದಾರ ಇವರು ಈಕಂಖ ಸಂಸ್ಥೆಯ ಕಾರ್ಯಚಟುವಟಿಕೆಗಳ ಕುರಿತು ತಿಳಿಸಿದರು ಹಾಗೂ "ಯುವ ಜನಾಂಗವೇ ದೇಶದ ಆಸ್ತಿ. ಯುವಜನರು ಶಿಕ್ಷಣದ ಜೊತೆಗೆ ಸಮಾಜ ಕಾರ್ಯ ಮಾಡುವ ಮನಸ್ಸು, ಮತ್ತು ಇಚ್ಛಾ ಶಕ್ತಿ ಹೊಂದಿದರೆ, ಯಾವುದೇ ಕಾರ್ಯವಾದರೂ ಸಾಧಿಸಬಹುದು, ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಬಹು ಮುಖ್ಯವಾಗಿದೆ. ಬದಲಾಗುತ್ತಿರುವ ಜಾಗತಿಕ ತಾಪಮಾನದಿಂದ ಪ್ರಕೃತಿಯ ಮೇಲೆ & ಮಾನವನ ಮೇಲೆ ಸಾಕಷ್ಟು ನಕಾರಾತ್ಮಕ ಪರಿಣಾಮ ಬೀರುತ್ತಿರುವುದರಿಂದ



ಇಂದಿನ ಯುವಜನತೆ ನಮ್ಮ ನೈಸರ್ಗಿಕ ಸಂಪತ್ತಾಗಿರುವ ಅರಣ್ಯ, ನೀರು, ಮಣ್ಣು ಇವುಗಳನ್ನು ಸರಂಕ್ಷಿಸಬೇಕೆಂದು" ಕರೆ ನೀಡಿದರು. ಪ್ರೌಢಶಾಲೆಯ ಮುಖ್ಯಗುರುಗಳಾದ ಶ್ರೀ ಶಿವಶರಣಪ್ಪಾ ಪಾಟೀಲ್ ಇವರು ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು, ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಒಳ್ಳೆಯ ಗುರಿ ಇಟ್ಟುಕೊಳ್ಳಬೇಕು, ಶಿಸ್ತು, ಸಂಯುಮ ಕಾಪಾಡಿಕೊಳ್ಳಬೇಕು. ಮಹಾನ್ ದಾರ್ಶನಿಕರ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಸತ್ಪಜೆಗಳಾಗಿ ಬೆಳೆಯಬೇಕೆಂದು ಕರೆ ನೀಡಿದರು. ವೇದಿಕೆಯ ಮೇಲಿದ್ದ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ಅರ್ಚನಾ ಹಾಗೂ ಪಾಲಕರಾದ ಶ್ರೀ ಬಸವರಾಜ ಇವರು ಕೂಡ ಕಾರ್ಯಕ್ರಮದ ಕುರಿತು ಮಾತನಾಡಿದರು.

ಈಕಂಖ ಸಂಸ್ಥೆಯ ವತಿಯಿಂದ ವಿದ್ಯಾರ್ಥಿಗಳಿಗಾಗಿ ಪ್ರಬಂಧ ಹಾಗೂ ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.ಪ್ರೌಢಶಾಲೆಯ ವಿದ್ಯಾರ್ಥಿನಿಯರು ಸ್ವಾಗತ ಕೋರಿ, ಕಾರ್ಯಕ್ರಮದ ನಿರೂಪಣೆ ಮಾಡಿದರು.

ಈ ಕಾರ್ಯಕ್ರಮದಲ್ಲಿ 200 ಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಿದರು.

## ಕೇಂದ್ರ ತಂಡಕ್ಕೆ ಮಳೆ ಹಾನಿಯ ತೀವ್ರತೆಯನ್ನು ಮನವರಿಕೆ ಮಾಡಿಸಿದ ಜಿಲ್ಲಾಡಳಿತ



**ಬೀದರ, ಜ.13:** ಕಳೆದ ಮುಂಗಾರು ಹಂಗಾಮಿನಲ್ಲಿ ಅತೀ ಹೆಚ್ಚು ಮಳೆಯಿಂದಾಗಿ ಸಂಭವಿಸಿದ ಬೆಳೆ ಹಾಗೂ ಮೂಲಭೂತ ಸೌಕರ್ಯಗಳ ಹಾನಿಯ ಕುರಿತು ಇಂದು ಬೀದರ ಜಿಲ್ಲೆಗೆ ಭೇಟಿ ನೀಡಿದ ಕೇಂದ್ರ ಸರ್ಕಾರದ ತಂಡಕ್ಕೆ ಜಿಲ್ಲಾಡಳಿತ ಮನವರಿಕೆ ಮಾಡಿಕೊಡಲಾಯಿತು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿಂದು ಈ ಕುರಿತು ಜರುಗಿದ ಸಭೆಯಲ್ಲಿ ಕೇಂದ್ರ ಸರಕಾರದ ಗೃಹ ಹಾಗೂ ಸಂಸದೀಯ ವ್ಯವಹಾರಗಳ ಜಂಟಿ ಕಾರ್ಯದರ್ಶಿ ರಾಜೀವಕುಮಾರ ನೇತೃತ್ವದ ತಂಡವು ಇಂದು ಬೀದರನಲ್ಲಿ ಮುಂಗಾರು ಪ್ರವಾಹದ ಹಾನಿ ಕುರಿತಾದ ಮಾಹಿತಿಯನ್ನು ಪಡೆದರು. ಕೇಂದ್ರ ಸರಕಾರದ ಕೃಷಿ ಹಾಗೂ ಎಣ್ಣೆ ಕಾಳು ಅಭಿವೃದ್ಧಿ ನಿಗಮದ ನಿರ್ದೇಶಕರಾದ ಡಾ.ಪೊನ್ನುಸ್ವಾಮಿ ಹಾಗೂ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಜಯಶ್ರೀ ಕಕ್ಕರ್ ಉಪಸ್ಥಿತರಿದ್ದರು.

ರಾಜ್ಯ ಸರಕಾರದ ಕಂದಾಯ ಇಲಾಖೆಯ ವಿಪತ್ತು ನಿರ್ವಹಾಣಾ ಪ್ರಧಾನ ಕಾರ್ಯದರ್ಶಿ ಮುನೀಶ್ ಮೌದ್ಗಿಲ್ ಹಾಗೂ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಕೇಂದ್ರ ತಂಡಕ್ಕೆ ಮುಂಗಾರು ಮಳೆಯಿಂದಾದ ಹಾನಿಯ ತೀವ್ರತೆ ಬಗ್ಗೆ ಮನವರಿಕೆ ಮಾಡಿಕೊಟ್ಟರು. ಆರಂಭದಲ್ಲಿ ಕೇಂದ್ರ ತಂಡದ ಜೊತೆ ವಿಡಿಯೋ ಸಂವಾದದ ಮೂಲಕ ಮಾತನಾಡಿದ ಕಂದಾಯ ಇಲಾಖೆಯ ಸಚಿವರಾದ ಕೃಷ್ಣ ಭೈರೆಗೌಡ ಅವರು ಇಡೀ ರಾಜ್ಯದಲ್ಲಾದ ಒಟ್ಟಾರೆ ಹಾನಿಯ ಸಮೀಕ್ಷಾ ವರದಿ ಹಾಗೂ ಪ್ರಸ್ತಾವನೆಯ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು. ಆಧುನಿಕ ತಂತ್ರಜ್ಞಾನ ಬಳಸಿ ಹಾನಿಯ ವರದಿಯನ್ನು ಆಯಾ ಜಿಲ್ಲೆಗಳು ಸಿದ್ಧಪಡಿಸಿವೆ. ಅಗತ್ಯ ಛಾಯಾಚಿತ್ರ ಹಾಗೂ ಪತ್ರಿಕಾ ವರದಿಗಳನ್ನು ಮಂಡಿಸಲಾಗಿದೆಯೆಂದರು.

ಮುನೀಶ್ ಮೌದ್ಗಿಲ್ ಅವರು ಮಾತನಾಡಿ, ರಾಜ್ಯದ ಕಲ್ಯಾಣ ಕರ್ನಾಟಕದಲ್ಲಾದ ಹೆಚ್ಚಿನ ಮಳೆ ಹಾಗೂ ಹಾನಿಯ ಬಗ್ಗೆ ತಂತ್ರಜ್ಞಾನ ಬಳಸಿ ಸಿದ್ದಪಡಿಸಿದ ವರದಿ ಹಾಗೂ ಅಗತ್ಯ ಅನುದಾನದ ಬೇಡಿಕೆ ಬಗ್ಗೆ ತಿಳಿಸಿದರು. ಬದಲಾದ ಹವಾಮಾನ ವೈಪರಿತ್ಯದ ಪರಿಣಾಮದಿಂದ ಕಳೆದ ರಾಜ್ಯಾದ್ಯಂತ ಸತತ ಪ್ರವಾಹ ಹಾಗೂ ಬರಗಾಲ ಸಂಭವಿಸುತ್ತಿದೆ. 125 ವರ್ಷಗಳ ಇತಿಹಾಸದಲ್ಲಿ ಮೇ.2025 ರಲ್ಲಿ ದಾಖಲೆಯ ಮಳೆಯಾಗಿ ಜಲಾಶಯ ಕೆರೆ, ಹಳ್ಳ ಕೊಳ್ಳ ತುಂಬಿ, ಬಹುತೇಕ ಎಲ್ಲ ಕೃಷಿ ಬೆಳೆ ಹಾಗೂ ತೋಟಗಾರಿಕಾ ಬೆಳೆಗಳು ನಾಶಗೊಂಡು ಸಾಕಷ್ಟು ಮೂಲಭೂತ ಸೌಕರ್ಯಗಳ ಹಾನಿಯಾಗಿದೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಶೇ.90% ಬೆಳೆ ಹಾನಿ ಸಂಭವಿಸಿದೆಯೆಂದು ಕೇಂದ್ರ ತಂಡಕ್ಕೆ ಅಂಕಿ ಸಂಖ್ಯೆಗಳ ಸಮೇತ ಮಾಹಿತಿ ನೀಡಿದರು. ಆಧುನಿಕ ತಂತ್ರಜ್ಞಾನ ಮೊಬೈಲ್ ಆಪ್ ಬಳಸಿ ಹಾನಿಯ ವರದಿ ಸಿದ್ದಪಡಿಸಲಾಗಿದೆ ಎಂದು ತಿಳಿಸಿದರು.

ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆ ಸೇರಿ ಪ್ರತಿ ಗ್ರಾಮದ ಪ್ರತಿ ಜಮೀನಿಗೆ ಸರ್ವೆ ನಂಬರವಾರು ಭೇಟಿ ನೀಡಿ ಸಮೀಕ್ಷೆ ಕೈಗೊಳ್ಳಲಾಗಿದೆ. ಪರಿಹಾರ ಆಪ್‌ನಲ್ಲಿ ವಿವರಗಳನ್ನು ದಾಖಲಿಸಿದೆ. ಪ್ರತಿ ರೈತರಿಗೆ ಆಧಾರ ಲಿಂಕ ಕಡ್ಡಾಯಗೊಳಿಸಿದ ಕಾರಣ ಪರಿಹಾರವು ನೇರವಾಗಿ ರೈತರ ಖಾತೆಗೆ ಜಮೆ ಆಗುತ್ತದೆ ಎಂದು ಮುನೀಶ್ ಮೌದ್ಗಿಲ್ ತಿಳಿಸಿದರು.

ಕೇಂದ್ರ ಸರಕಾರದ ಪುನರ್ ನಿರ್ಮಾಣದ ನಿಯಮಾವಳಿಯಂತೆ ಮೂಲಭೂತ ಸೌಕರ್ಯಗಳ ಹಾನಿಯ ವರದಿಯನ್ನು ಸಿದ್ಧಪಡಿಸಲಾಗಿದೆಯೆಂದರು.

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಮಾತನಾಡಿ, ಬೀದರ ಜಿಲ್ಲೆಯಲ್ಲಾದ ಮಳೆ ಹಾನಿ ಕುರಿತು ಛಾಯಾಚಿತ್ರಗಳು ಹಾಗೂ ಪತ್ರಿಕಾ ವರದಿಗಳ ಮೂಲಕ ವಿವರಿಸಿದರು. ಒಟ್ಟು 1.67 ಲಕ್ಷ ಹೆ. ಹಾನಿಗೊಳಗಾಗಿದ್ದು, ಜಿಲ್ಲೆಯಲ್ಲಿ ಒಟ್ಟಾರೆ 711 ಕೋಟಿ ರೂ. ಹಾನಿಯಾದ ಬಗ್ಗೆ ತಿಳಿಸಿದರು. ರಾಜ್ಯ ಸರಕಾರದ ವಿಪತ್ತು ನಿರ್ವಹಣಾದಿಂದ ಬಿಡುಗಡೆಯಾದ 133 ಕೋಟಿ ರೂ.ಗಳನ್ನು ವಿತರಿಸಲಾಗಿದೆ. ಒಟ್ಟು 1502 ಮನೆಗಳು ಹಾನಿಯಾಗಿದೆ. ರಸ್ತೆ, ಸೇತುವೆ ವಿವಿಧ ಮೂಲಭೂತ ಸೌಕರ್ಯಗಳ 231 ಕೋಟಿ ರೂ. ಹಾನಿಯಾಗಿದೆಯೆಂದು ತಿಳಿಸಿದರು.

ಜಿಲ್ಲಾಡಳಿತ ನೀಡಿದ ಹಾನಿಯ ವರದಿಯನ್ನು ಪರಿಗಣಿಸಿ ಕೇಂದ್ರ ಸರಕಾರಕ್ಕೆ ಮನವರಿಕೆ ಮಾಡಿಕೊಡಲಾಗುದೆಂದು ಕೇಂದ್ರ ಸರಕಾರದ ಗೃಹ ಹಾಗೂ ಸಂಸದೀಯ ವ್ಯವಹಾರಗಳ ಜಂಟಿ ಕಾರ್ಯದರ್ಶಿ ರಾಜೀವಕುಮಾರ ತಿಳಿಸಿದರು.

ಈ ಸಂದರ್ಭದಲ್ಲಿ ಬೀದರ ಮಹಾನಗರ ಪಾಲಿಕೆಯ ಆಯುಕ್ತರಾದ ಮುಕುಲ್ ಜೈನ್, ಬೀದರ ಸಹಾಯಕ ಆಯುಕ್ತರಾದ ಮೊಹಮ್ಮದ ಶಕೀಲ್ ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಹಾಗೂ ತಹಸೀಲ್ದಾರರು ಉಪಸ್ಥಿತರಿದ್ದರು. ಕೇಂದ್ರ ತಂಡವು ಔರಾದ್ ತಾಲ್ಲೂಕಿನ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ರೈತರೊಂದಿಗೆ ಚರ್ಚಿಸಿದರು.

ಮೊದಲನೇ ಪುಟದಿಂದ

## ರಾಯಚೂರು ಉತ್ಸವ: ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತೊಂದು ಸುತ್ತಿನ ಸಿದ್ಧತಾ ಸಭೆ

ಸಹಕಾರ ಪಡೆಯಬೇಕು ಎಂದು ತಿಳಿಸಿದರು. ಈ ವೇಳೆ ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಮಾತನಾಡಿ, ರಾಯಚೂರು ಉತ್ಸವ ಹಿನ್ನೆಲೆಯಲ್ಲಿ ಈಗಾಗಲೇ ರಾಯಚೂರು ಸಿಟಿಯ ಸೌಂದರ್ಯೀಕರಣ ಕಾರ್ಯ ಭರ್ಜರಿ ನಡೆದಿದೆ. ರಸ್ತೆ ಅಗಲೀಕರಣ, ದುರಸ್ಥಿ ಕಾರ್ಯ ನಡೆದಿದ್ದು ಜನತೆ ಸಹಕಾರ ನೀಡಬೇಕು. ನಗರದ ಎಲ್ಲ ಮುಖ್ಯರಸ್ತೆಗಳು ಸುಂದರವಾಗಿ ಕಾಣುವಂತೆ ಪಾಲಿಕೆ ಕೈಗೊಂಡ ಕಾರ್ಯಕ್ಕೆ ಜನತೆ ಸಹಕರಿಸಬೇಕು. ಕಸವನ್ನು ಎಲ್ಲೆಂದರಲ್ಲಿ ಎಸೆಯಬಾರದು. ರಾಯಚೂರು ಸಿಟಿ ಸೇರಿದಂತೆ ಜಿಲ್ಲೆಯ ಎಲ್ಲ ವ್ಯಾಪಾರಸ್ಥರು ಈಗಿನಿಂದಲೇ ರಾಯಚೂರು ಉತ್ಸವದ ಅಲಂಕಾರ ಕಾರ್ಯಕ್ಕೆ ಕಾರ್ಯಯೋಜನೆ ರೂಪಿಸಿ ಸಹಕರಿಸಬೇಕು ಎಂದು ಎಲ್ಲ ವ್ಯಾಪಾರಸ್ಥರಲ್ಲಿ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಶರಣಬಸವರಾಜ್, ತಹಸೀಲ್ದಾರರಾದ ಸುರೇಶ್ ವರ್ಮ, ಅಮರೇಶ ಬಿರಾದಾರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ಸಭೆಯಲ್ಲಿ ಇದ್ದರು.

## ರಾಯಚೂರು ಜಿಲ್ಲಾ ಉತ್ಸವ–2026ಕ್ಕೆ ಕವಿತೆ ಕಳುಹಿಸಲು ಜನವರಿ 14 ಕೊನೆಯ ದಿನ

**ರಾಯಚೂರು ಜ,13–** 2026ರ ಜನವರಿ 29, 30 ಮತ್ತು 31ರಂದು ರಾಯಚೂರಿನಲ್ಲಿ ಜಿಲ್ಲಾಡಳಿತದಿಂದ ನಡೆಯಲಿರುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ನಿಮಿತ್ತ ಕವಿಗೋಷ್ಠಿ ನಡೆಸಲು ರಾಯಚೂರು ಜಿಲ್ಲಾಡಳಿತವು ರಾಯಚೂರು ಜಿಲ್ಲಾ ವ್ಯಾಪ್ತಿಯಲ್ಲಿನ ಕವಿಗಳಿಂದ ಸ್ವರಚಿತ ಕವಿತೆಗಳನ್ನು ಆಹ್ವಾನಿಸಿದ್ದು, ಕವಿತೆಗಳನ್ನು ಕಳುಹಿಸಲು ಜನವರಿ 14 ಕೊನೆಯ ದಿನವಾಗಿದೆ.

ಕವಿತೆಯು ಸ್ವತಂತ್ರ ರಚನೆಯಾಗಿರಬೇಕು. ಕವಿತೆಯನ್ನು ಒಂದು ಪುಟ ಮೀರದಂತೆ ನುಡಿ ಅಥವಾ ಯುನಿಕೋಡ್‌ನಲ್ಲಿ ಟೈಪ್ ಮಾಡಿ ವರ್ಡ್ ಫಾರ್ಮೇಟನಲ್ಲಿ ಇ–ವಿಳಾಸ raichurdipr@gmail.com ಗೆ ಇ–ಮೇಲ್ ಮಾಡಬಹುದು. ಅಥವಾ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪತ್ರಿಕಾ ಭವನದ ಮೊದಲನೇ ಮಹಡಿ, ಶ್ರೀ ಪಂಡಿತ ಸಿದ್ದರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರ ಹಿಂದುಗಡೆ, ರೈಲ್ವೆ ನಿಲ್ದಾಣದ ರಸ್ತೆ, ರಾಯಚೂರು ಜಿಲ್ಲೆ, ರಾಯಚೂರು ಇಲ್ಲಿಗೆ ಪೋಸ್ಟ್ ಮಾಡಬಹುದು. ಅಥವಾ ಮೊಬೈಲ್ ಸಂಖ್ಯೆ 9916111356 ಅಥವಾ 9008462236 ಗೆ ವಾಟ್ಸಪ್ ಮಾಡಬಹುದಾಗಿದೆ.

ಕವಿತೆಯೊಂದಿಗೆ ಕಡ್ಡಾಯವಾಗಿ ತಮ್ಮ ಹೆಸರು, ಸ್ಥಳ, ವಿದ್ಯಾರ್ಹತೆ, ದೂರವಾಣಿ ಸಂಖ್ಯೆಯ ವಿವರ, ವಿಳಾಸದ ದಾಖಲೆಗಾಗಿ ಆಧಾರ್ ಕಾರ್ಡ್ ಝರಾಕ್ಸ ಪ್ರತಿ ಮತ್ತು ವಯಸ್ಸಿನ ದಾಖಲೆಗಾಗಿ ಎಸ್ಸೆಸ್ಸೆಲ್ಸಿ ಅಂಕಪಟ್ಟಿ ಅಥವಾ ಬೇರೆ ಯಾವುದೇ ದಾಖಲೆಗಳನ್ನು ಕಳುಹಿಸಬೇಕು. ಕವಿಗಳ ಆಯ್ಕೆಯಲ್ಲಿ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. ಕೊನೆಯ ದಿನಾಂಕದ ನಂತರ ಬರುವ ಕವಿತೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ರಾಯಚೂರು ಜಿಲ್ಲಾ ಉತ್ಸವದ ಪುಸ್ತಕ ಪ್ರದರ್ಶನ, ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ ಸಮಿತಿಯ ಪ್ರಕಟಣೆ ತಿಳಿಸಿದೆ.

# 16 ಜನ ಪೌರಕಾರ್ಮಿಕರ ಖಾಯಂಗಾಗಿ ದಲಿತ ಸಂಘಟನೆಗಳ ಸಮನ್ವಯ ಸಮಿತಿ ವತಿಯಿಂದ ಸಿಎಂಗೆ ಮನವಿ



**ಜೇವರ್ಗಿ :ಜ.13:**ಪುರಸಭೆ ಪೌರ ನೌಕರರ ಕಾಯಂ ಮಾಡಬೇಕು ಎಂದು ದಲಿತ ಸುಮಾರು 15 ವರ್ಷಗಳಿಂದ ಕೆಲಸ ಮಾಡಿಸಿಕೊಂಡು ಕೈ ಬಿಟ್ಟ 16 ಜನ ಪೌರಕಾರ್ಮಿಕರನ್ನು ಖಾಲಿ ಇರುವ (ಪಿ.ಕೆ) ಹುದ್ದೇಗಳಿಗೆ ತಕ್ಷಣ ನೇಮಕಾತಿ ಮಾಡುವಂತೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ನವರಿಗೆ ದಲಿತ ಸಂಘಟನೆಗಳ ಸಮನ್ವಯ ಸಮಿತಿ ವತಿಯಿಂದ ಮನವಿ ಪತ್ರ ಸಲ್ಲಿಸಲಾಯಿತು ಕೂಡಲೇ ಮುಖ್ಯ ಮಂತ್ರಿ ಕಲಬುರ್ಗಿ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಬೇಕು, ಪೌರಕಾರ್ಮಿಕರು ಸುಮಾರು 15 ವರ್ಷಗಳಿಂದ ಜೇವರ್ಗಿ ಪಟ್ಟಣವನ್ನು ಪ್ರತಿದಿನ ಬೆಳಗಿನ ಜಾವ 5 ಗಂಟೆಗೆ ಎದ್ದು ಪಟ್ಟಣದ 23 ವಾರ್ಡಗಳಲ್ಲಿನ ರಸ್ತೆ ಸ್ವಚ್ಚಗೊಳಿಸುವುದು, ಚರಂಡಿ ಶುದ್ಧಗೊಳಿಸುವುದು ರಸ್ತೆ ಮೇಲೆ ಸತ್ತ ದನ, ನಾಯಿ, ಹಂದಿ ಮತ್ತು ಇತರೆ ಪ್ರಾಣಿಗಳನ್ನು ಸ್ಥಳಾಂತರಿಸುವುದು ಪಟ್ಟಣದ ಮುಖ್ಯ ರಸ್ತೆಯನ್ನು ಸ್ವಚ್ಚಗೊಳಿಸುವುದು ಈ ರೀತಿಯಾಗಿ ಜನರ ಆರೋಗ್ಯವನ್ನು ಕಾಯುತ್ತ ಬಂದಿರುವ ಪೌರಕಾರ್ಮಿಕರು ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಕೋವಿಡ್-19ನಂತಹ ಮಹಾಮಾರಿ ವೈರಸ್ ಬಂದಾಗಲೂ ಜೀವದ ಹಂಗು ತೊರೆದು ಪಟ್ಟಣದ ಜನರನ್ನು ರಕ್ಷಿಸಲು ಹಗಲು ರಾತ್ರಿ ಪ್ರಮಾಣಿಕವಾಗಿ ಕೆಲಸ ಮಾಡಿದ್ದಾರೆ.

ಪುರಸಭೆ ಅಧಿಕಾರಿಗಳು ತಮ್ಮ ಮನ ಬಂದಂತೆ ದುಡಿಸಿಕೊಂಡು ತಿಂಗಳಿಗೆ ಎರಡು ಸಾವಿರ, ಮೂರು ಸಾವಿರ, ನಾಲ್ಕು ಸಾವಿರದಂತೆ ಕೈ ಚೀಟಿ ಮುಖಾಂತರ ಪೌರಕಾರ್ಮಿಕರಿಗೆ ಸಂಬಳವನ್ನು ನೀಡಿರುತ್ತಾರೆ. ಮೊದಲೇ ದಲಿತ ಕುಟುಂಬದಿಂದ ಬಂದ ಪೌರಕಾರ್ಮಿಕರು ತಮ್ಮ' ಬಡತನದ ಬೇಗುದಿಗೆ ಅಧಿಕಾರಿಗಳು ಕೊಟ್ಟಷ್ಟು ಸಂಬಳವನ್ನು ಪಡೆದುಕೊಂಡು ಉಪ ಜೀವಿಸುತ್ತಾ 'ಆಶಾಭಾವನೆಯೊಂದಿಗೆ ಪುರಸಭೆಯಲ್ಲಿ ಪೌರಕಾರ್ಮಿಕರಾಗಿ ತಮ್ಮ ಕೆಲಸ ಮುಂದುವರೆಸುತ್ತಾ ಬಂದಿರುತ್ತಾರೆ. ಆದರೆ ಪುರಸಭೆ ಅದಿಕಾರಿಗಳ ಕುತಂತ್ರದಿಂದ ಅವರು ಬೀದಿಗೆ ಬಂದಿದ್ದಾರೆ ಈ ಹಿಂದೆ ಅನೇಕ ಸಂಘಟನೆಗಳು ಹಲವು ಬಾರಿ ಪ್ರತಿಭಟನೆ , ಧರಣಿ ಕುಳಿತರು ಸ್ಥಳಿಯ ಶಾಸಕರು ಹಾಗೂ ಅಧಿಕಾರಿಗಳ ನಿರ್ಲಕ್ಷದಿಂದ ಕಾರ್ಮಿಕರು ಬೀದಿಗೆ ಬಂದಿದ್ದಾರೆ ಆದಕಾರಣ ಅವರನ್ನು ಮರು ನೇಮಕ ಮಾಡುವಂತೆ ಸಂಭಧಪಟ್ಟ ಅಧಿಕಾರಿಗಳಿಗೆ ಸೂಚಿಸಬೇಕೆಂದು ಜೇವರ್ಗಿ ತಾಲೂಕ ದಲಿತ ಸಂಘಟನೆಗಳ ಸಮನ್ವಯ ಸಮಿತಿ ವತಿಯಿಂದ ಆಗ್ರಹ. ಭೀಮರಾಯ ನಗನೂರ್ ಸಿದ್ದರಾಮಕಟ್ಟಿ ಸಿದ್ದು ಕೆರೂರ ಮಾಪಣ್ಣ ಕಟ್ಟಿ ಮಲ್ಲಣ್ಣ ಕೊಡಚಿ ಶ್ರೀ ಹರಿ ಕರ್ಕಳ್ಳಿ ವಿಶ್ವರಾಧ್ಯೆ ಮಾಯಿ, ದೇವಿಂದ್ರ ವರ್ಮಾ, ಭೀಮರಾಯ ಬಳಬಟ್ಟಿ, ಸಿದ್ದಪ್ಪ ಆಲೂರ, ರಾಘು ಹಂಗರಗಿ, ನಾಗರಾಜ್, ಯಲ್ಲಾಲಿಂಗ ಕಟ್ಟಿ ಸಂಗಾವಿ ಮೌನೇಶ ಹಂಗರಗಿ ಇದ್ದರು

# ಕಾಡು ನಾಯಿಗಳ ಹಿಂಡು ದಾಳಿ ಸಾಕು ಎಮ್ಮೆ ಬಲಿ

**ಹನೂರು.ಜ.13:-** ಕಾಡು ನಾಯಿಗಳ ಹಿಂಡು ದಾಳಿಗೆ ಸಾಕು ಎಮ್ಮೆ ಬಲಿಯಾಗಿರುವ ಘಟನೆ ಕಾವೇರಿ ವನ್ಯಜೀವಿ ವಲಯ ವ್ಯಾಪ್ತಿಯ ದಂಟ್ಟಳ್ಳಿ ಗ್ರಾಮದ ಹೊರ ವಲಯದಲ್ಲಿ ಇಂದು ಸೋಮವಾರ ಮಧ್ಯಾಹ್ನ ವೇಳೆಗೆ ನಡೆದಿದೆ. ಎಮ್ಮೆ ಸಾಕಿದ್ದ ರೈತರ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಹನೂರು ತಾಲೂಕಿನ ದಂಟ್ಟಳ್ಳಿ ಗ್ರಾಮದ ನಂದೀಶ್ ಎಂಬುವರ ಸಾಕು ಎಮ್ಮೆ ಕಾಡು ನಾಯಿಗಳ ದಾಳಿಗೆ ಬಲಿಯಾಗಿದೆ. ಸೋಮವಾರ ಮಧ್ಯಾಹ್ನ ಗ್ರಾಮದ ಹೊರ ವಲಯದ ಜಮೀನಿನ ಹತ್ತಿರ ಮೇವು ಮೇಯಲು ಹೋಗಿದ್ದ ಎಮ್ಮೆಯನ್ನು ಕಾಡು ನಾಯಿಗಳ ಹಿಂಡು ಏಕಾ ಏಕಿ ಬಂದು ದಾಳಿ ಮಾಡಿದೆ. ನಾಯಿಗಳ ದಾಳಿಗೆ ಎಮ್ಮೆಯು ಸ್ಥಳದಲ್ಲೇ ಸಾವನ್ನಪ್ಪಿದೆ.
ಘಟನೆ ಸಂಬಂಧ ಅರಣ್ಯ ಇಲಾಖೆ ಅಧಿಕಾರಿಗಳ ಗಮನಕ್ಕೆ ತಿಳಿಸಿದ್ದಾರೆ. ನಂತರ ಸ್ಥಳಕ್ಕೆ ಭೇಟಿ ನೀಡಿ ಅರಣ್ಯ ಇಲಾಖೆಯ ಗಾರ್ಡ್ ಮಹೇಂದ್ರ ಅವರು ಮಾಹಿತಿ ಪಡೆದು ಪರೀಶೀಲನೆ ನಡೆಸಿದರು. ನಂತರ ನಾಳೆ ಮಂಗಳವಾರ ಪಶು ವೈದ್ಯಕೀಯ ಪರೀಕ್ಷೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಕಾವೇರಿ ವನ್ಯಜೀವಿ ವಲಯಕ್ಕೆ ಹೊಂದಿ ಕೊಂಡಂತೆ ಇರುವ ದಂಟ್ಟಳ್ಳಿ ಗ್ರಾಮದ ಜಮೀನುಗಳಲ್ಲಿ ಮೇವು ಮೇಯಲು ಹೋಗುವ ದನ ಕರು ಕುರಿ ಮೇಕೆಗಳನ್ನು ಎಮ್ಮೆಗಳನ್ನು ಬೇಟೆಯಾಡಲು ಕಾಡು ಪ್ರಾಣಿಗಳು ಯಾವಾಗಲೂ ಬರುತ್ತವೆ.



ಸಾಕು ಪ್ರಾಣಿಗಳ ಮೇಲೆ ಕಾಡು ಪ್ರಾಣಿಗಳು ದಾಳಿ ಮಾಡರುವ ಘಟನೆಗಳು ಹಲವಾರು ನಡೆದಿದೆ ಈ ಬಗ್ಗೆ ಅರಣ್ಯ ಇಲಾಖೆಯವರ ಗಮನಕ್ಕೆ ತಿಳಿಸಲಾಗಿದೆ.
ಕಾಡು ನಾಯಿಗಳು ಇತ್ತೀಚೆಗೆ ಜಮೀನು ಗ್ರಾಮಗಳತ್ತ ಬರುವುದು ಹೆಚ್ಚಾಗಿದೆ. ಹೆಮ್ಮೆ ದನಕರುಗಳು ಕುರಿ ಮೇಕೆಗಳ ಮೇಲೆ ದಾಳಿ ಮಾಡಿ ಪ್ರಾಣ ಹಾನಿ ಮಾಡುತ್ತಿವೆ. ಇದರಿಂದ ಸಾಕುಪ್ರಾಣಿಗಳನ್ನು ನಂಬಿಕೊಂಡು ಜೀವನ ಕಟ್ಟಿಕೊಳ್ಳುವ ರೈತರ ಬದುಕು ಸಂಕಷ್ಟಕ್ಕೆ ಸಿಲುಕಿದಂತಾಗುತ್ತದೆ. ಈ ಬಗ್ಗೆ ಇನ್ನಾದರೂ ಅರಣ್ಯ ಇಲಾಖೆಯ ಅಧಿಕಾರಿಗಳು ಎಚ್ಚೆತ್ತು ಮುಂಜಾಗ್ರತಾ ಕ್ರಮ ಕೈಗೊಂಡು ಕಾಡುಪ್ರಾಣಿಗಳ ಹಾವಳಿಯನ್ನು ತಪ್ಪಿಸಬೇಕು ಎಂದು ಗ್ರಾಮದ ರಮೇಶ್ ಅವರು ಪತ್ರಿಕೆಗೆ ತಿಳಿಸಿದ್ದಾರೆ.

# ವಲಸೆ ಯಾಕ್ರಿ ನಿಮ್ಮೂರಲ್ಲೆ ಉದ್ಯೋಗ ಖಾತರಿ ಯೋಜನೆಯಡಿ ಗ್ರಾಮಗಳಲ್ಲಿ ಉದ್ಯೋಗ: ಆಸ್ರ ಜಬೀನಾ ಖಾನಂ



ಧೈರ್ಯದ ದಾರಿ

**ಮಾನ್ವಿ,ಜ.13-**ತಾಲೂಕಿನ ಸಂಗಾಪೂರ ಗ್ರಾಮದಲ್ಲಿ ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯತಿ ಹಾಗೂ ಆರೋಗ್ಯ ಇಲಾಖೆ ಸಹಯೋಗದಲ್ಲಿ ನಡೆದ ಗ್ರಾಮದ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ ನರೇಗಾ ಕೂಲಿ ಕಾರ್ಮಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಗ್ರಾ.ಪಂ.ಅಭಿವೃದ್ಧಿ ಅಧಿಕಾರಿ ಆಸ್ರ ಜಬೀನಾ ಖಾನಂ ಚಾಲನೆ ನೀಡಿ ಮಾತನಾಡಿ ಸರ್ಕಾರವು ಗ್ರಾಮ ಪಂಚಾಯಿತಿಗಳ ಮೂಲಕ ಗ್ರಾಮೀಣ ಭಾಗದ ಕೃಷಿ ಕೂಲಿಗಳು ಮಹಾನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವುದಕ್ಕಾಗಿ ವಲಸೆ ಯಾಕ್ರಿ ನಿಮ್ಮೂರಲ್ಲೆ ಉದ್ಯೋಗ ಖಾತರಿ ಹಾಗೂ ಸ್ತ್ರೀ ಚೇತನ ಅಭಿಯಾನದಡಿಯಲ್ಲಿ ತಮ್ಮ ಗ್ರಾಮದಲ್ಲಿಯೇ ಗ್ರಾಮೀಣ ಪ್ರದೇಶದ ಪ್ರತಿ ಅರ್ಹ ಕುಟುಂಬದವರು ಒಂದು ಆರ್ಥಿಕ ವರ್ಷದಲ್ಲಿ 100 ದಿನ ಕೆಲಸವನ್ನು ಪಡೆಯುವ ಮೂಲಕ ಗಂಡು ಮತ್ತು ಹೆಣ್ಣಿಗೆ ಸಮಾನವಾಗಿ ಪ್ರತಿ ದಿನಕ್ಕೆ 370 ರೂ ಕೂಲಿಯನ್ನು ನೀಡಲಾಗುವುದು.

ಅದರಂತೆ 37 ಸಾವಿರ ರೂ ಕೂಲಿಯನ್ನು ಪಡೆಯ ಬಹುದಾಗಿದೆ. ಹಾಗೂ ಪ್ರಧಾನ ಮಂತ್ರಿ ಭೀಮಾ ಸುರಕ್ಷಾ ಯೋಜನೆ ಮತ್ತು ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಯೋಜನೆಯಡಿಯಲ್ಲಿ ಕೆಲಸದ ಸ್ಥಳದಲ್ಲಿ ಮೃತಪಟ್ಟಲ್ಲಿ ಕುಟುಂಬದ ಅವಲಂಭಿತರಿಗೆ 2ಲಕ್ಷ ವಿಮೆ ಪರಿಹಾರವನ್ನು ನೀಡಲಾಗುವುದು. ಸಾಮಾಜಿಕ ಭದ್ರತೆ ಕಲ್ಪಿಸಲು ನರೇಗ ಯೋಜನೆಯಡಿಯಲ್ಲಿ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, ವಿಶೇಷ ಚೇತನರು ಹಾಗೂ ಗರ್ಭಿಣಿಯರಿಗೆ ಕೇಲಸದಲ್ಲಿ ಶೇ 50ರಷ್ಟು ವಿನಾಯಿತಿ ದೊರೆಯುತ್ತದೆ.ಕೂಲಿ ಕಾರ್ಮಿಕರ 3 ವರ್ಷದೊಳಗಿನ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಶಿಶು ಪಾಲನಾ ಕೇಂದ್ರದ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ತಿಳಿಸಿದರು.

ಉಚಿತ ಆರೋಗ್ಯ ಶಿಬಿರದಲ್ಲಿ ಆರೋಗ್ಯ ಇಲಾಖೆಯ ಸಮುದಾಯ ಆರೋಗ್ಯ ಅಧಿಕಾರಿ ಸುಭಾನ್ ನರೇಗಾ ಕೂಲಿ ಕಾರ್ಮಿಕರಿಗೆ ರಕ್ತದೊತ್ತಡ,,ಮಧುಮೇಹ.ರಕ್ತದ ಕ್ಯಾನ್ಸರ್, ಕಫ,ಸೇರಿದಂತೆ ಅಗತ್ಯ ಆರೋಗ್ಯ ತಪಾಸಣೆ ನಡೆಸಿ ಔಷಾಧಿಗಳನ್ನು ವಿತರಿಸಿದರು.
ಕಾರ್ಯಕ್ರಮದಲ್ಲಿ ಪ್ರಾಥಮಿಕ ಸಮುದಾಯ ಸುರಕ್ಷ ಅಧಿಕಾರಿ ಯಲ್ಲಮ್ಮ , ತಾಲೂಕ ಐ.ಇ.ಸಿ. ಸಂಯೋಜಕರಾದ ಈರೇಶ್, ಆಶಾ ಕಾರ್ಯಕರ್ತೆಯರಾದ ಶ್ರೀ ದೇವಿ,ನೀಲಮ್ಮ ,ಕರಿಬಸಯ್ಯ ಡಿ.ಇ.ಓ. ,ರಾಯಪ್ಪ ಬಿ .ಎಫ್. ಟೀಗಳು ಹಾಗೂ ನರೇಗ ಕೂಲಿ ಕಾರ್ಮಿಕರು ಇದ್ದರು.

# ಸಾವಿತ್ರಿಬಾಯಿ ಫುಲೆ ಜನ್ಮದಿನಾಚರಣೆ ವಿಜೃಂಭಿಸಿದ ಗೀತಗಾಯನ ಸಂಭ್ರಮ




**ಕೊಳ್ಳೇಗಾಲ.ಜ.13:-** ಅನುಪಮ ಟ್ರಸ್ಟ್ (ರಿ)ಚಾಮರಾಜನಗರ ವತಿಯಿಂದ ಅಕ್ಷರದವ್ವ ಸಾವಿತ್ರಿಬಾಯಿ ಫುಲೆಯವರ ಜನುಮ ದಿನಾಚರಣೆ ಮತ್ತು ನಿವೃತ್ತ ಉಪನ್ಯಾಸಕರಾದ ಸರಸ್ವತಿ ಹೊನ್ನಪ್ಪ ರವರ ಜನುಮದಿನಾಚರಣೆ ಪ್ರಯುಕ್ತ ಆಯೋಜಿಸಲಾಗಿದ್ದ ಗೀತಗಾಯನ ಸಂಭ್ರಮ ಕಾರ್ಯಕ್ರಮ ಅತ್ಯಂತ ಅರ್ಥಪೂರ್ಣ ವಾಗಿ ಜರುಗಿತು.

ಕಾರ್ಯಕ್ರಮದಲ್ಲಿ ಬುಧ್ಧ ವಂದನೆಯ ಮೂಲಕ ಕಾರ್ಯಕ್ರಮ ಪ್ರಾರಂಭಿಸಿ ಗಿಡಕ್ಕೆ ನೀರೆರೆಯುವುದರ ಮೂಲಕ ಉದ್ಘಾಟನೆಯನ್ನು ನೆರವೇರಿಸಿದ ಅನುಪಮ ಟ್ರಸ್ಟ್ ನ ಅಧ್ಯಕ್ಷರಾದ ಡಾ.ಪ್ರೇಮಾ ವೈ ಕೆ ಮೋಳೆ ರವರು ತಮ್ಮ ಆಶಯ ಮತ್ತು ಪ್ರಾಸ್ತಾವಿಕ ನುಡಿಯನ್ನು ಆಡುತ್ತಾ ಅಂದಿನ ಕಾಲಘಟ್ಟದಲ್ಲಿ ಸಮಾಜದಲ್ಲಿ ಮಹಿಳೆಯರು ಯಾವರೀತಿ ಶೋಚ ನೀಯ ಪರಿಸ್ಥಿತಿಯಲ್ಲಿದ್ದರು.

ಯಾವರೀತಿ ತುಳಿತಕ್ಕೊಳಗಾಗುತ್ತಿದ್ದರು,ಅಕ್ಷರದ ಪರಿಚಯವಿಲ್ಲದೇ ,ಗುಲಾಮಳಂತೆ ಪಶುವಿನಂತೆ ಬದುಕಿ ಗಂಡಿನ ಸರಿಸಮಾನವಾಗಿ ನಿಲ್ಲಲು ಅಸಾಧ್ಯವಾಗಿದ್ದ ಅಂದಿನ ಕಾಲದ ದೇವತೆಯಂತೆ ಸಾವಿತ್ರಿಬಾಯಿ ಫುಲೆಯರವರು ಅಕ್ಷರದಾತೆಯಾದರು.ಇಂದು ಇಂತಹ ಸುಸ್ಥಿತಿಗೆ ಅವರು ಹಾಕಿದ ಮಾರ್ಗವೇ ಕಾರಣ ಹಾಗಾಗಿ ಇಂತಹ ಕಾರ್ಯಕ್ರಮ ಮಾಡ ಬೇಕೆನಿಸಿತು.
ಹಿರಿಯ ಮಾತೆ ಸಮಾನರು ಸರಸ್ವತಿ ಹೊನ್ನಪ್ಪ ರವರ ಜನ್ಮ ದಿನಾಚರಣೆಯನ್ನು ಮಾಡಿ ಮಹಿಳೆಯರ ಸಬಲೀಕರಣ ಮಾಡುವ ಉತ್ಕಟ ಆಕಾಂಕ್ಷೆ ನನ್ನಲ್ಲಿದೆ. ಅದೇ ರೀತಿ ಚಾಮರಾಜನಗರ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು ಕಲಾವಿದರು, ಗಾಯಕರು ,ಪ್ರತಿಭಾವಂತರು ಇದ್ದಾರೆ. ಅವರೆಲ್ಲರನ್ನು ಗುರ್ತಿಸಿ ಅಭಿನಂದಿಸಿ ಪ್ರೋತ್ಸಾಹಿಸುವುದೇ, ನಮ್ಮ ಟ್ರಸ್ಟ್ ನ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದರು.
ಹಿರಿಯ ಜಾನಪದ ಸಾಹಿತಿಗಳು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಶಂಕನಪುರ ಮಹಾದೇವ ಮಾತನಾಡಿ ,ನಮ್ಮ ನೆಲೆ ಸಾಂಸ್ಕೃತಿಕ ನೆಲೆಗಟ್ಟನ್ನು ಹೊಂದಿದ್ದು ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು ತಮ್ಮ ಕಾರ್ಯಸಾಧನೆಯನ್ನು ಮಾಡಿದ್ದಾರೆ .ಅದರಲ್ಲೂ ಭಾರತದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿಫುಲೆಯವರ ಸಮಾಜ ಮುಖಿ ಕೆಲಸ ಮಾದರಿಯಾಗಿದೆ.ಮಕ್ಕಳಿಗೆ ಇದು ತಲುಪಬೇಕಿದೆ. ಬುಧ್ಧ ಬಸವ ಅಂಬೇಡ್ಕರರ ತತ್ವಗಳನ್ನು ಅರ್ಥಮಾಡಿಸಬೇಕಿದೆ ಎಂದು ತಿಳಿಸಿಕೊಟ್ಟರು.

ಅರುಣ್ ಕುಮಾರ್ ಮಾಂಬಳ್ಳಿ ರವರು ಮಾತನಾಡಿ ಅಧ್ಭುತ ಕಾರ್ಯಕ್ರಮ ಎಂದು ಶ್ಲಾಘಿಸಿದರು. ಸನ್ಮಾನ ಸ್ವೀಕರಿಸಿ ಅಭಿವಂದಿಸಿ ಮಾತನಾಡಿದ ನಂಜುಂಡಯ್ಯ ರವರು ಇಂತಹ ಸಮಾಜದ ಪರ ಕಾಳಜಿ ಹೊತ್ತು,ಮಹಿಳೆಯ ಬಲವರ್ಧನೆಯ ಪ್ರಗತಿಪರ ಕಾರ್ಯಕ್ರಮಗಳು ಈಗಿನ ಕಾಲಕ್ಕೆ ಅತ್ಯವಶ್ಯಕವಾಗಿವೆ .ನಾವು ಕೂಡ ಶೈಕ್ಷಣಿಕವಾಗಿ ಉಚಿತ ಸಿ ಇ ಟಿ ಕೋಚಿಂಗ್ ಕೆಲಸ ಕಾರ್ಯಗಳನ್ನು ಮಾಡುವ ಪ್ರಯತ್ನ ಮಾಡುತ್ತಿದ್ದೇನೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸರಸ್ವತಿ ಹೊನ್ನಪ್ಪ ರವರು ಇದೊಂದು ಸುಂದರ ಸುಮಧುರ ಜಾಗೃತಿ ಕಾರ್ಯಕ್ರಮ ಅದರಲ್ಲೂ ವಿಶೇಷವಾಗಿ ಮಹಿಳೆಯರು ತಮ್ಮ ಪ್ರತಿಭೆಯನ್ನು ಹೊರಹಾಕಲು ಸುಂದರ ವೇದಿಕೆಗಳ ಅಗತ್ಯವಿದೆ.ಎಂದರು. ಕಾರ್ಯಕ್ರಮದಲ್ಲಿ ಗಾಯಕರು ಮತ್ತು ಅಂತರ ರಾಷ್ಟ್ರೀಯ ಜಾನಪದ ಪ್ರಶಸ್ತಿ ಪುರಸ್ಕೃತರಾದ ಶ್ರೀ ಯುತ ಕೈಲಾಸಮೂರ್ತಿ ರವರು,ಕೃಷ್ಣಮೂರ್ತಿ, ಚಂಚಳ್ಳಿ ರವರು, ಮೊಹಮ್ಮದ್ ಗೌಸ್, ರವಿಶಂಕರ್ ಸೇರಿದಂತೆ 25 ಕ್ಕೂ ಹೆಚ್ಚು ಗಾಯಕರು ಉಪಸ್ಥಿತರಿದ್ದು,ತಮ್ಮ ಕಂಠ ಸಿರಿಯಲ್ಲಿ ಭಾವಗೀತೆಗಳು ಭಕ್ತಿಗೀತೆ, ಜಾನಪದ, ಚಿತ್ರಗೀತೆಗಳ ಗಾನಸುಧೆಯನ್ನೇ ಸುರಿಸಿದರು.

ಗೀತ ಗಾಯನದಲ್ಲಿ ಭಾಗವಹಿಸಿದ ಎಲ್ಲಾ ಕಲಾವಿದರಿಗೂ ಅನುಪಮ ಟ್ರಸ್ಟ್ ವತಿಯಿಂದ ಅಭಿನಂದನಾ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ದಲಿತ ಸಾಹಿತ್ಯ ಪರಿಷತ್ ಮಹಿಳಾಘಟಕ ಚಾಮರಾಜನಗರ ವತಿಯಿಂದ ಆಗಮಿಸಿದ್ದ ಪುಷ್ಪಮರಿಸ್ವಾಮಿ, ಯಶೋಧ, ಭಾಗ್ಯಗೌರೀಶ್ ನಿರ್ದೇಶಕರು ದಲಿತ ಸಾಹಿತ್ಯ ಪರಿಷತ್ತು ಮಹಿಳಾ ಘಟಕ ಚಾಮರಾಜನಗರ, ಪುಷ್ಪಲತ, ನಂದಿನಿ ಸೇರಿದಂತೆ ಇನ್ನಿತರರು ಇದ್ದರು.

# ಯಾರು ಇತಿಹಾಸ ಅರಿಯುತ್ತಾರೆ ಅಂತವರು ಇತಿಹಾಸ ನಿರ್ಮಿಸುತ್ತಾರೆ

**ಚನ್ನಮ್ಮನ ಕಿತ್ತೂರು,ಜ13:** ಸಂಗೊಳ್ಳಿ ರಾಯಣ್ಣ, ಕಿತ್ತೂರು ಚನ್ನಮ್ಮ, ಬೆಳವಡಿ ಮಲ್ಲಮ್ಮ, ಇನ್ನೂ ಅನೇಕ ಮಹನೀಯರ ಶೌರ್ಯ, ಸಾಹಸ, ದೇಶ ಪ್ರೇಮ, ಇವರ ತ್ಯಾಗ, ಬಲಿದಾನ ದೇಶಕ್ಕೆ ತಿಳಿಸಲು ಸರ್ಕಾರ ಮುಂದಾಗಿದೆ ಎಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.



ಸಮೀಪದ ಸಂಗೊಳ್ಳಿ ಗ್ರಾಮದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಡೆದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಉತ್ಸವ ಸಮಾರಂಭದ ಸಭೆ ಅಧ್ಯಕ್ಷತೆ ವಹಿಸಿ ದೀಪ ಬೆಳಗಿಸಿ ಮಾತನಾಡಿದರು. ರಾಯಣ್ಣ ಎಲ್ಲರಿಗೂ ಸ್ಪೂರ್ತಿ ಮತ್ತು ಆದರ್ಶಪ್ರಾಯವಾಗಿದ್ದಾನೆ. ಇಲ್ಲಿ ಸಂಗೊಳ್ಳಿ ರಾಯಣ್ಣ ಸ್ಕೂಲ್, ರಾ ಗಾರ್ಡನ್ ನೋಡಲು ಪ್ರವಾಸಿಗರು ಆಗಮಿಸುತ್ತಾರೆ. ಅದರ ಮೂಲಕ ಇತಿಹಾಸ ತಿಳಿದುಕೊಳ್ಳುವಂತಾಗಿದೆ. ರಾಯಣ್ಣನ ನೆನಪಿಗಾಗಿ ಸರ್ಕಾರ ಹಲವಾರು ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದು ಅವು ರಾಷ್ಟದಲ್ಲಿಯೇ ಹೆಸರುವಾಸಿಯಾಗಿವೆ. ಯಾರು ಇತಿಹಾಸ ಅರಿಯುತ್ತಾರೆ ಅಂತವರು ಇತಿಹಾಸ ನಿರ್ಮಿಸುತ್ತಾರೆಂದರು.

ಮುಖ್ಯ ಅತಿಥಿಯಾಗಿ ಶಾಸಕ ಬಾಬಾಸಾಹೇಬ ಪಾಟೀಲ ಮಾತನಾಡಿ ಹೆಸರಿಗೆ ಉತ್ಸವ ಮಾಡುವುದಲ್ಲ ಉತ್ಸವಕ್ಕೆ ಮೆರಗು ಸಿಗಬೇಕು. ಮಹನೀಯರ ಶೌರ್ಯ ಯುವಪೀಳಿಗೆಗೆ ತಿಳಿಸುವ ಸಲುವಾಗಿ ಸರ್ಕಾರ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಇಂತಹ ಮಹನೀಯರ ಹಾಡು ಅಥವಾ ಕಥೆ ಕೇಳಿ ಮನೆಗೊಬ್ಬ ರಾಯಣ್ಣ ಹುಟ್ಟಲಿ ಈ ನಾಡು, ದೇಶ ಸೇವೆಗೆ ಸದಾ ಸನ್ನದ್ದರಾಗಬೇಕೆಂದು ಕಿವಿ ಮಾತು ಹೇಳಿದರು.

ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂದೆ ಸಭೆ ಉದ್ಘಾಟಿಸಿ ಮಾತನಾಡಿ ಬ್ರಿಟಿಷರನ್ನು ಹೊಡೆದೊಡಿಸಿ ನಮಗೆ ಸ್ವಾತಂತ್ರ್ಯ ತಂದುಕೊಟ್ಟ ಸಂಗೊಳ್ಳಿ ರಾಯಣ್ಣ ಇಂತಹ ಪುಣ್ಯಭೂಮಿಯಲ್ಲಿ ಹುಟ್ಟಿದ್ದು ನಮ್ಮ ಭಾಗ್ಯ ಅವರ ಸವಿ ನೆನೆಪಿನಗೋಸ್ಕರ ಸರ್ಕಾರ ಮ್ಯೂಜಿಯಂ ಮಾಡಿದೆ ಅದನ್ನು ಸದ್ಯದಲ್ಲಿಯೇ ಮುಖ್ಯಮಂತ್ರಿಯವರು ಉದ್ಘಾಟಿಸಲಿದ್ದಾರೆ. ಇಂತಹ ಉತ್ಸವ ಹಮ್ಮಿಕೊಂಡು ಯುವಪೀಳಿಗೆಗೆ ಇತಿಹಾಸ ತಿಳಿಸಲು ಸರ್ಕಾರ ಮುಂದಾಗಿದ್ದು ಶ್ಲಾಘನೀಯವೆಂದರು.
ರಾಜಗುರು ಸಂಸ್ಥಾನ ಕಲ್ಮಠ ಮಡಿವಾಳ ರಾಜಯೋಗಿಂದ್ರ ಸ್ವಾಮಿಜೀ ಆರ್ಶೀವಚನ ನೀಡಿ ಮಾತನಾಡಿ ಸ್ವಾತಂತ್ರ್ಯಕ್ಕೆ ದಕ್ಕೆ ಬಂದಾಗ ಚನ್ನಮ್ಮಾಜೀ ಮತ್ತು ರಾಯಣ್ಣ, ಇನ್ನೂ ಹಲವಾರು ಮಹನೀಯರು ಹೋರಾಡಿದ್ದಾರೆ. ಸಂಗೊಳ್ಳಿ ಎಂದರೆ ತ್ಯಾಗ, ಬಲಿದಾನದ ಪ್ರತೀಕ. ಬ್ರಿಟಿಷರನ್ನು ಎದುರಿಸಿದ್ದು ಈ ನಾಡಿನ ವೀರರು ಇಷ್ಟೇಲ್ಲಾ ಕಿತ್ತೂರು ವೀರತ್ವ ಉಳಿಯಲು ರಾಯಣ್ಣ ಮತ್ತು ಚನ್ನಮ್ಮಳೇ ಕಾರಣ. ಅದಕ್ಕಾಗಿ ರೈತರಿಗೂ ಹೋರಾಟ ಕಲಿಸಿಕೊಟ್ಟರು. ಇಂದು ಯುವ ಪಿಳಿಗೆಗೆಗಳು ಇತಿಹಾಸ ಅರಿಯಬೇಕು. ಇಂತಹ ಶೂರ ಸಂಗೊಳ್ಳಿ ರಾಯಣ್ಣನ ಹೆಸರು ದೇಶದಲ್ಲಿ ಪಸರಿಸಲು ಸರ್ಕಾರ ಮುಂದಾಗಿದ್ದು ನಮ್ಮಗೇಲ್ಲರಿಗೂ ಸಂತಸದ ವಿಷಯವೆಂದರು.

ಸಂಗೊಳ್ಳಿ ಗುರು ಸಿದ್ದಲಿಂಗೇಶ್ವರ ಸಂಸ್ಥಾನ ಹಿರೇಮಠ ಗುರುಲಿಂಗ ಶಿವಾಚಾರ್ಯ ಸ್ವಾಮಿಜೀ ಸಾನಿಧ್ಯ ವಹಿಸಿಕೊಂಡಿದ್ದರು.

ಸಭೆಯಲ್ಲಿ ಗ್ರಾಪಂ ಅಧ್ಯಕ್ಷ ರೂಪಾ ಚಚಡಿ, ವಿನಯ ನಾವಲಗಟ್ಟಿ, ಉಪವಿಭಾಗಾಧಿಕಾರಿ ಪ್ರವೀಣ ಜೈನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ವಿದ್ಯಾವತಿ ಬಜಂತ್ರಿ ವಂದಿಸಿದರು, ತಹಶೀಲ್ದಾರ ಹನಮಂತ ಶಿರಹಟ್ಟಿ ಸ್ವಾಗತಿಸಿದರು, ತಹಶೀಲ್ದಾರುಗಳಾದ, ಕಲ್ಲನಗೌಡ ಪಾಟೀಲ, ಬಸವರಾಜ ಹೆಗ್ಗಣ್ಣವರ, ಡಿಎಚ್ಓ ಈಶ್ವರ ಗಡಾದ, ಇಓ ಸಂಜೀವ ಜಿನ್ನೂರ, ಡಿವೈಎಸ್ಪಿ ವೀರಯ್ಯಾ ಹಿರೇಮಠ, ಪಿಡಿಓ ಅಡಿವೆಪ್ಪ ತಳವಾರ, ಸಿಬ್ಬಂದಿ, ಗ್ರಾಪಂ ಸರ್ವಸದಸ್ಯರು, ಇತರರಿದ್ದರು.

# ಸ್ವಾಮಿ ವಿವೇಕಾನಂದ ಜನ್ಮದಿನಾಚರಣೆ

**ಬಳ್ಳಾರಿ, ಜ.12:** ರಾಷ್ಟ್ರೀಯ ಯುವ ದಿನ ಹಾಗೂ ಸ್ವಾಮಿ ವಿವೇಕಾನಂದರ ಜನ್ಮದಿನದ ಅಂಗವಾಗಿ.. ಎಕತಾ ಇನ್ಸ್ಟಂಟ್ ಆಫ್ ಫೈರಿಂಗ್ ಟ್ರೈನಿಂಗ್ ಸೆಂಟರ್ ನಲ್ಲಿ ಶ್ರೀ ವಿವೇಕಾನಂದ ಯುವಕರ ಸಂಘದ ವತಿಯಿಂದ ವಿವೇಕಾನಂದ ಜಯಂತಿಯನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು.. ಈ ಸಂದರ್ಭದಲ್ಲಿ ವಿವೇಕಾನಂದ ಸಂಘದ ಅಧ್ಯಕ್ಷರಾದ ಹಾಗೂ ಮಹಾಪೌರರಾದ ಪಿ ಗಾದೆಪ್ಪನವರು ಶ್ರೀ ವಿವೇಕಾನಂದರ ಬಗ್ಗೆ ಮಹತ್ವದ ಸಂದೇಶವನ್ನು ನೀಡಿ ಇಂದಿನ ಯುವಕರು ಶ್ರೀವಿವೇಕಾನಂದರ ಗುಣಗಳನ್ನು ಅಳವಡಿಸಿಕೊಂಡು ಸಮಾಜ ದಲ್ಲಿ ಉತ್ತಮ



ನಾಗರಿಕರಾಗಲು ಕರೆ ನೀಡಿದರು. ಈ ಸಂದರ್ಭದಲ್ಲಿ ವಿವೇಕಾ ನಂದ ಸಂಘದ ಪದಾಧಿಕಾರಿಗಳು ಹಾಗೂ ಟ್ರೈನಿಂಗ್ ಸೆಂಟರ್ ನ ವಿದ್ಯಾರ್ಥಿಗಳು. ಉಪಸ್ಥಿತರಿದ್ದರು.

# ಮನರೇಗಾ ತಿದ್ದುಪದಿ ಕರಾಳ ಶಾಸಕ



**ಮೈಸೂರು: ಜ.13:–** ಮಹಾತ್ಮ ಗಾಂಧೀ ಉದ್ಯೋಗ ಖಾತರಿ (ಮನರೇಗಾ) ಯೋಜನೆ ತಿದ್ದುಪಡಿ ಮಾಡಿ ವಿಕಸಿತ ಭಾರತ್ ಗ್ರಾಮ ಕಾಯಿದೆಯೂ ಕರಾಳ ಶಾಸನವಾಗಿದೆ. ಬಡವರು, ಕಾರ್ಮಿಕರ ವಿರೋಧಿಯಾದ ಈ ಮಸೂದೆಯನ್ನು ರದ್ದು ಮಾಡುವಂತೆ ಆಗ್ರಹಿಸಿ ಹೋರಾಟ ಮಾಡುತ್ತೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದರು.

ನಗರ ಕಾಂಗ್ರೆಸ್ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2005ರಲ್ಲಿ ಮನಮೋಹನ್ ಸಿಂಗ್ ಜಾರಿಗೆ ತಂದಿದ್ದ ಮನರೇಗಾ ಯೋಜನೆ ಬಡ ಜನರಿಗೆ ಉದ್ಯೋಗ ಖಾತರಿ ನೀಡಿತ್ತು. ಮಹಾತ್ಮ ಗಾಂಧೀಜಿಯವರ ಅಂತ್ಯೋದಯ ಮತ್ತು ಸ್ವರಾಜ್ ಆಶಯ ಒಳಗೊಂಡಿತ್ತು. ಆದರೆ, ಕೇಂದ್ರ ಸರ್ಕಾರ ಮಾಡಿರುವ ಮನರೇಗಾ ತಿದ್ದುಪಡಿ ದುಡಿಯುವ ಹಕ್ಕಿನ ವಿರುದ್ಧವಾಗಿದೆ ಎಂದರು.
ಮಹಾತ್ಮ ಗಾಂಧೀಜಿ ಹೆಸರನ್ನು ಬದಲಾವಣೆ ಮಾಡಿರುವ ಕೇಂದ್ರ ಸರ್ಕಾರ ರಾಷ್ಟ್ರೀಯ ಅವಮಾನ ಮಾಡಿದೆ. ಇದರಿಂದ ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ಅವಮಾನವಾಗಿದೆ. ಕೇಂದ್ರದ ಎನ್‌ಡಿಎ ಸರ್ಕಾರ ಅನೇಕ ಹೆಸರುಗಳನ್ನು ಬದಲಾವಣೆ ಮಾಡುತ್ತಿದೆ. ಆದರೆ, ದೇಶದ ಅಭಿವೃದ್ಧಿ, ಜನರ ಸ್ಥಿತಿ ಹಾಗೆಯೇ ಇದೆ ಎಂದು ಹೇಳಿದರು.

ಮನರೇಗಾ ತಿದ್ದುಪಡಿ ರಾಜಕೀಯ, ಆರ್ಥಿಕ ಮತ್ತು ಸಂವಿಧಾನದ ಹಕ್ಕನ್ನು ಉಲ್ಲಂಘನೆ ಮಾಡುತ್ತದೆ. ರಾಜ್ಯ ಸರ್ಕಾರಗಳೊಂದಿಗೆ ಚರ್ಚಿಸದೇ ತರಾತುರಿಯಲ್ಲಿ ಕಾಯಿದೆ ಮಂಡಿಸಿರುವುದು ಸರ್ವಾಧಿಕಾರಿ ಧೋರಣೆಯಾಗಿದೆ. ಈ ಕಾಯಿದೆ ದುಡಿಯುವ ಹಕ್ಕಿಗೆ ಮಾರಕವಾಗಿದೆ ಎಂದರು.

ಪ್ರಧಾನಿ ಮೋದಿ ಅವರು ಕೋವಿಡ್‌ನಂತಹ ಸಂಕಷ್ಟದ ಕಾಲದಲ್ಲಿ ದೀಪ ಹಚ್ಚಿ, ಜಾಗಟೆ ಬಡಿಯುವಂತೆ ಕರೆಕೊಟ್ಟರು. ಆದರೆ ನರೇಗಾ 19 ಕೋಟಿ ಜನರಿಗೆ ನೆರವಾಯಿತು. ದೇಶದಲ್ಲಿ 12 ಕೋಟಿ ಜನರು ಮತ್ತು ರಾಜ್ಯದಲ್ಲಿ 70 ಲಕ್ಷ ಜನರು ಅವಲಂಬಿತರಿದ್ದಾರೆ. ನರೇಗಾ ಉದ್ಯೋಗವನ್ನು ಅವಲಂಬಿಸಿರುವ 7 ಸಾವಿರ ನೌಕರರು ಬೀದಿ ಪಾಲಾಗುತ್ತಾರೆ ಎಂದು ಆರೋಪಿಸಿದರು. ಹೊಸ ಕಾಯಿದೆಯಿಂದ ಸುಗ್ಗಿ ಕಾಲದಲ್ಲಿ ಕೆಲಸ ಇರುವುದಿಲ್ಲ. ಗ್ರಾಮ ಸಭೆ, ಪಂಚಾಯಿತಿ ಅಧಿಕಾರ ಮೊಟಕು ಮಾಡಲಾಗಿದೆ. ದನದ ಕೊಟ್ಟಿಗೆ, ಹೊಲದ ರಸ್ತೆ ನಿರ್ಮಾಣ ಸೇರಿದಂತೆ ಯಾವುದಕ್ಕೂ ಅವಕಾಶ ಇಲ್ಲವಾಗಿದೆ. ದೇಶದ ಜನಪರವಾದ ಯೋಜನೆಯನ್ನು ಸಂಪೂರ್ಣ ನಾಶ ಮಾಡುವ ಪ್ರಯತ್ನ ಕೇಂದ್ರ ಸರ್ಕಾರ ಮಾಡುತ್ತಿದೆ. ಇದನ್ನು ಖಂಡಿಸಿ ರಾಜ್ಯದ ಮೂಲೆಮೂಲೆಯಲ್ಲಿ ಪ್ರತಿಭಟನೆ ಮಾಡುತ್ತೇವೆ ಎಂದು ಹೇಳಿದರು.

ನರೇಗಾ ಯೋಜನೆ ಮರು ಜಾರಿಗೊಳಿಸಬೇಕು. ಜನರ ಉದ್ಯೋಗದ ಹಕ್ಕನ್ನು ಪುನರ್ ಸ್ಥಾಪಿಸಬೇಕು. ಪಂಚಾಯಿತಿಗಳ ಸ್ವಯಂ ಆಡಳಿತದ ಹಕ್ಕನ್ನು ಮರು ಸ್ಥಾಪಿಸಬೇಕು. ದೇಶದಾದ್ಯಂತ 400 ರೂ.ಗಳ ಕನಿಷ್ಠ ವೇತನ ನೀಡಬೇಕು ಎಂದು ಆಗ್ರಹಿಸಿದರು.

**ಬಿಜೆಪಿ ಪಾದಯಾತ್ರೆ ಹಾಸ್ಯಾಸ್ಪದ:** ಬಿಜೆಪಿ ನಾಯಕರು ಬಳ್ಳಾರಿಯಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡುವುದಾಗಿ ಘೋಷಿಸಿರುವುದು ಹಾಸ್ಯಾಸ್ಪದವಾಗಿದೆ. ಹಿಂದೆ ಬಳ್ಳಾರಿ ಪರಿಸ್ಥಿತಿ ಯಾವ ರೀತಿ ಇತ್ತು. ಇಡೀ ಸಂಪತ್ತು ನಾಲ್ಕು ಕುಟುಂಬಕ್ಕೆ ಸೇರಿತ್ತು. ಕಾನೂನು ಸುವ್ಯವಸ್ಥೆ, ಆಡಳಿತ ವ್ಯವಸ್ಥೆ ಯಾರ ಹಿಡಿತದಲ್ಲಿತ್ತು. ಅದರ ವಿರುದ್ಧ ನಾವು ಬಳ್ಳಾರಿಗೆ ಪಾದಯಾತ್ರೆ ಮಾಡಿದ್ದೆವು. ಇವರ ಪಾದಯಾತ್ರೆ ಯಾರ ವಿರುದ್ಧ ಎಂದು ಮಹದೇವಪ್ಪ ಪ್ರಶ್ನಿಸಿದರು. ಖಾಸಗಿ ಸಂಸ್ಥೆಯಲ್ಲಿ ಮೀಸಲಾತಿ ಕೊಡುವುದಕ್ಕೆ ಉದ್ಯಮಿ ಕಿರಣ್ ಮಜೂಂದಾರ್ ವಿರೋಧ ವ್ಯಕ್ತಪಡಿಸಿದ್ದಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಕೊಡಬೇಕು. ನಾವು ಭೂಮಿ, ನೀರು ಎಲ್ಲವನ್ನೂ ಕೊಡುತ್ತೇವೆ. ಮುಂದುವರೆದರೆ ಹೇಗೆ ಉತ್ತರ ಕೊಡಬೇಕೋ ಆ ರೀತಿ ಕೊಡುತ್ತೇವೆ. ಅವರು ಸರ್ಕಾರದ ಸೌಲಭ್ಯಗಳನ್ನು ಪಡೆದವರು. ನಿಯಮಗಳಿಗೂ ಬದ್ಧರಾಗಿರಬೇಕಾಗುತ್ತದೆ. ಕೊಡದಿದ್ದರೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದರು.


ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಖಂಡರಾದ ಭಾಸ್ಕರ್ ಗೌಡ, ಸೋಮಶೇಖರ್, ಕೆ. ಮಹೇಶ್ ಇದ್ದರು.

# ಕುಖ್ಯಾತ ಮನೆಗಳ್ಳನ ಬಂಧನ

**ಬೆಂಗಳೂರು,ಜ.13–**ಬೀಗ ಹಾಕಿದ ಮನೆಗಳನ್ನು ಗುರುತಿಸಿ ಕಳವು ಮಾಡುತ್ತಿದ್ದ ಕುಖ್ಯಾತ ಮನೆಗಳ್ಳನನ್ನು ಬಂಧಿಸಿರುವ ಮೈಕೋ ಲೇಔಟ್ ಪೊಲೀಸರು ವಜ್ರ, ಚಿನ್ನ, ಬೆಳ್ಳಿ, ವಿದೇಶಿ ನೋಟುಗಳು ಸೇರಿ 7.36 ಲಕ್ಷ ಮೌಲ್ಯದ ಮಾಲುಗಳನ್ನು ಜಪ್ತಿ ಮಾಡಿದ್ದಾರೆ.
ತಮಿಳುನಾಡಿನ ತಿರುವಣ್ಣಾಮಲೈ ನ ರಾಮಸ್ವಾಮಿ(45) ಬಂಧಿತ ಆರೋಪಿಯಾಗಿದ್ದಾನೆ,ಆತನಿಂದ 6,200 ನಗದು,33 ಗ್ರಾಂ ವಜ್ರ, ಚಿನ್ನಾಭರಣಗಳು, 1 ಕೆ.ಜಿ 220 ಗ್ರಾಂ ಬೆಳ್ಳಿ, ವಿದೇಶಿ ನೋಟುಗಳು ಸೇರಿ 7.36 ಲಕ್ಷ ಮೌಲ್ಯದ ಮಾಲುಗಳನ್ನು ವಶಪಡಿಸಿಕೊಳ್ಳಲಾಗಿದೆ.
ಮೈಕೋ ಲೇಔಟ್ ನ ವಿಜಯಾ ಬ್ಯಾಂಕ್ ಲೇಔಟ್‌ನಲ್ಲಿ ವ್ಯಕ್ತಿಯೊಬ್ಬರು ಸಂಬಂಧಿಕರು ಕುಟುಂಬ ಸಮೇತ ಕಳೆದ ಡಿ.22ರಂದು ಭೂತಾನ್‌ಗೆ ಪ್ರವಾಸ ಹೋಗಿದ್ದಾಗ
ಡಿ.28 ರಂದು ಮನೆ ಕೆಲಸದಾಕೆಯು ಫೋನ್ ಕರೆ ಮಾಡಿ ಮನೆಯ ಬೀಗ ಮುರಿದಿರುವುದನ್ನು ತಿಳಿಸಿದ್ದರು, ಕೂಡಲೇ ಪ್ರವಾಸದಲ್ಲಿದ್ದವರು ಫೋನ್ ಕರೆಮಾಡಿ ಸಂಬಂಧಿಕರಿಗೆ ತಿಳಿಸಿದ್ದು,ಅವರು ಮನೆಯ ಬಳಿ ಬಂದು ನೋಡಲಾಗಿ, ಯಾರೋ ಕಳ್ಳರು ಮನೆಯ 1 ಮತ್ತು 2ನೇ ಮಹಡಿಯ ಮನೆಯ ಬಾಗಿಲ ಬೀಗವನ್ನು ಮುರಿದು ಮನೆಯ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿ ಹೋಗಿರುರುವುದನ್ನು ತಿಳಿಸಿದ್ದು,ಅವರಿಂದಲೇ ದೂರು ದಾಖಲಿಸಲಾಗಿತ್ತು.
ಪ್ರಕರಣದ ತನಿಖೆಯನ್ನು ವಿವಿಧ ಆಯಾಮಗಳಲ್ಲಿ ತನಿಖೆಯನ್ನು ಕೈಗೊಂಡು ಖಚಿತ ಮಾಹಿತಿಯನ್ನು ಕಲೆಹಾಕಿ ಕಳೆದ ಜ.5 ರಂದು ಹೊಂಗಸಂದ್ರದ ಬಸ್ ನಿಲ್ದಾಣದ ಬಳಿ ಕಾರ್ಯಾಚರಣೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ. ಪ್ರಕರಣದಲ್ಲಿ ಚಿನ್ನ, ವಜ್ರ ಮತ್ತು ಬೆಳ್ಳಿ ವಸ್ತುಗಳು ಹಾಗೂ ನಗದನ್ನು ಕಳವು ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಕಳವು ಮಾಡಿದ ವಜ್ರ ಮತ್ತು ಚಿನ್ನಾಭರಣಗಳನ್ನು ಆತನ ಅತ್ತಿಗೆಯ ಮನೆಯಲ್ಲಿ ಅವರಿಗೆ ತಿಳಿಯದಂತೆ ಇಟ್ಟಿದ್ದು, ಅವುಗಳನ್ನು ಯಾರಿಗಾದರೂ ಮಾರಾಟ ಮಾಡೋಣವೆಂದು ತಮಿಳುನಾಡಿನಿಂದ ಬೆಂಗಳೂರಿಗೆ ಬಂದಿರುವುದಾಗಿ ತಿಳಿಸಿರುವುದನ್ನು ಬಾಯ್ಬಿಟ್ಟಿದ್ದಾನೆ.
ಆತನ ವಶದಲ್ಲಿದ್ದ 33 ಗ್ರಾಂ ವಜ್ರ ಮತ್ತು ಚಿನ್ನಾಭರಣಗಳು, 1 ಕೆ.ಜಿ 220 ಗ್ರಾಂ ಬೆಳ್ಳಿಯ ವಸ್ತುಗಳು ಮತ್ತು ವಿದೇಶಿ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ.
ಆರೋಪಿಯು ಹಲವು ವರ್ಷಗಳಿಂದ ನಗರದ ಕುಮಾರಸ್ವಾಮಿ ಲೇಔಟ್, ಗಿರಿನಗರ, ಸುಬ್ರಮಣ್ಯಪುರ, ಮಡಿವಾಳ, ರಾಮಮೂರ್ತಿನಗರ, ಬನಶಂಕರಿ, ಸಿ.ಕೆ.ಅಚ್ಚುಕಟ್ಟು ಮತ್ತು ಸುಬ್ರಮಣ್ಯನಗರ ಪೊಲೀಸ್ ಠಾಣಾ ಸರಹದ್ದಿನಲ್ಲಿ ಮನೆಗಳ್ಳತನ ಮಾಡಿ, ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರಬಂದು ತಮಿಳುನಾಡಿಗೆ ಹೋಗಿ ವಾಸವಾಗಿದ್ದಾನೆ. ಖರ್ಚಿಗೆ ಹಣದ ಅವಶ್ಯಕತೆ ಇದ್ದ ಕಾರಣ ಯಾವುದಾದರೂ ಮನೆಗಳ್ಳತನ ಮಾಡಿ ಹಣ ಸಂಪಾದನೆ ಮಾಡೋಣವೆಂದು ಈಗ್ಗೆ ಸುಮಾರು ಒಂದು ವಾರದ ಹಿಂದೆ ತಮಿಳುನಾಡಿನಿಂದ ಬೆಂಗಳೂರಿಗೆ ಬಂದು ಬೀಗ ಹಾಕಿದ್ದ ಮನೆಯ। ಮತ್ತು 2ನೇ ಮಹಡಿಯ ಮನೆಯ ಬೀಗ ಮುರಿದು ವಜ್ರ, ಚಿನ್ನ, ಬೆಳ್ಳಿ ವಸ್ತುಗಳನ್ನು, ಕಳ್ಳತನ ಮಾಡಿರುವುದನ್ನು ಬಾಯ್ಬಿಟ್ಟಿದ್ದಾನೆ.
ಮೈಕೋಲೇಔಟ್ ಪೊಲೀಸ್ ಇನ್ಸ್‌ಪೆಕ್ಟರ್ ನಟರಾಜ್ ಡಿ.ಎನ್ ಮತ್ತವರ ಸಿಬ್ಬಂದಿ ಪ್ರಕರಣವನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದೆ.

## ನಾಪತ್ತೆಯಾಗಿರುವ ಚೀಟಿ ವೆಂಕಟೇಶ್ ಪತ್ತೆಗೆ ನೊಂದವರ ಮನವಿ

**ಬಳ್ಳಾರಿ,ಜ.13–** ಕಳೆದ 15 ದಿನಗಳಿಂದ ನಾಪತ್ತೆಯಾಗಿರುವ ಹಾವಂಬಾಯಿ ಪ್ರದೇಶದ ನಿವಾಸಿ ಚೀಟಿ ವೆಂಕಟೇಶ್ ಪತ್ತೆಗೆ. ಆತನ ಬಳಿ ಚೀಟಿ ಹಾಕಿ ನೊಂದಿರುವ ಜನತೆ ಇಂದು ಬ್ರೂಸ್ ಪೇಟೆ ಠಾಣೆ ಬಳಿಗೆ ಬಂದು ಅಲ್ಲಿಂದ ಎಸ್ಪಿ ಕಚೇರಿಗೆ ತೆರಳಿ ಮನವಿ ಮಾಡಿದ್ದಾರೆ.ನಾಪತ್ತೆಯಾಗಿರುವ ವೆಂಕಟೇಶ್ ಹಲವಾರು ವರ್ಷಗಳಿಂದ ಚೀಟಿ ವ್ಯವಹಾರ ಮಾಡುತ್ತಿದ್ದ. ಲಕ್ಷಾಂತರ ರೂಗಳ ಚೀಟಿ ಹಾಕುತ್ತಿದ್ದ. ನಗರದಲ್ಲಿ ಬಹುತೇಕ ವ್ಯಾಪಾರಿಗಳು, ವೈದ್ಯರು, ಅಂಗಡಿ ಮುಂಗಟ್ಟುಗಳ ಮಾಲೀಕರು, ಸಾರ್ವಜನಿಕರು ಪ್ರತಿ ತಿಂಗಳು ಚೀಟಿ ವ್ಯವಹಾರ ಮಾಡಿದ್ದರು.ಕೋಟ್ಯಾಂತರ ರೂಗಳ ಚೀಟಿ ವ್ಯವಹಾರ ಈತನದಾಗಿತ್ತು. ಆದರೆ ಈತ ಜ.30 ರಂದು ರಾತ್ರಿ ನಗರದ ಬೆಂಗಳೂರು ರಸ್ತೆಯ ಹೆಚ್.ಎಲ್.ಸಿ. ಕಾಲುವೆ ಬಳಿ ತನ್ನ ಬೈಕ್ ಬಿಟ್ಟು, ಅದರಲ್ಲಿ ತನ್ನ ಎರಡು



ಮೊಬೈಲ್ ಇಟ್ಟು ನಾಪತ್ತೆಯಾ ಗಿದ್ದಾನೆ. ಮನೆಯವರು ಈತನ ಬಗ್ಗೆ ನಾಪತ್ತೆ ಪ್ರಕರಣ ದಾಖಲಿಸಿದ್ದಾರೆ. ಆದರೆ ಮಾರುಕಟ್ಟೆಯಲ್ಲಿ ಈತ ಪೂರ್ವ ನಿರ್ಧಾರಿತನಾಗಿ ಐಪಿ ಇಟ್ಟು ಜನರಿಗೆ ವಂಚನೆ ಮಾಡಿ ತಲೆ ಮರೆಸಿಕೊಂಡಿದ್ದಾನೆ ಆತನನ್ನು ಪತ್ತೆಹಚ್ಚಿ ನಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಆಗ್ರಹಿಸಿದ್ದಾರೆ.

# ಬಾಂಗ್ಲಾ ಪೊಲೀಸ್ ಕಸ್ಟಡಿಯಲ್ಲಿ ಹಿಂದೂ ಸಂಗೀತಗಾರ ಪ್ರೋಲೋಯ್ ನಿಧನ

**ಢಾಕಾ, ಜ.13–** ಖ್ಯಾತ ಹಿಂದೂ ಸಂಗೀತಗಾರ ಮತ್ತು ಹಿರಿಯ ಅವಾಮಿ ಲೀಗ್ ಕಾರ್ಯಕರ್ತ ಪ್ರೋಲೋಯ್ ಚಾಕಿ ಬಾಂಗ್ಲಾದೇಶದಲ್ಲಿ ಪೊಲೀಸ್ ಕಸ್ಟಡಿಯಲ್ಲಿ ನಿಧನರಾಗಿರುವ ಘಟನೆ ನಡೆದಿದೆ.ಈ ಮೂಲಕ ಇತ್ತೀಚಿನ ದಿನಗಳಲ್ಲಿ ಬಾಂಗ್ಲಾದೇಶದಲ್ಲಿ ಮೃತಪಟ್ಟ 7 ನೇ ಹಿಂದೂ ಸಮುದಾಯದವರಾಗಿದ್ದಾರೆ.



ಚಾಕಿ ಕುಟುಂಬ ಸದಸ್ಯರು 60 ವರ್ಷದ ಹಿರಿಯ ನಾಗರಿಕರಿಗೆ ಪೊಲೀಸ್ ಠಾಣೆಯಲ್ಲಿ ಅಗತ್ಯ ವೈದ್ಯಕೀಯ ಆರೈಕೆಯನ್ನು ನಿರಾಕರಿಸಿದ್ದಾರೆ ಎಂದು ಪ್ರೋಲೋಯ್ ವಿರುದ್ಧ ಆರೋಪ ಮಾಡಿದ್ದಾರೆ.ಈ ನಡುವೆ ಪೊಲೀಸರು ಇದು "ನೈಸರ್ಗಿಕ ಸಾವು" ಎಂಬ ಕುಟುಂಬದ ಸದಸ್ಯರ ಹೇಳಿಕೆಯನ್ನು ತಳ್ಳಿಹಾಕಿದ್ದಾರೆ 2024ರ ತಾರತಮ್ಯ ವಿರೋಧಿ ವಿದ್ಯಾರ್ಥಿ ಚಳವಳಿಗೆ ಸಂಬಂಧಿಸಿದ ಸ್ಫೋಟ ಪ್ರಕರಣದಲ್ಲಿ ಬಂಧಿತರಾಗಿದ್ದ ಪ್ರೋಲೋಯ್ ಚಾಕಿ ನಂತರ 'ಜುಲೈ ದಂಗೆ'ಯಾಗಿ ಬೆಳೆದು ಶೇಖ್ ಹಸೀನಾ ಅವರನ್ನು ಪ್ರಧಾನಿ ಹುದ್ದೆಯಿಂದ ಪದಚ್ಯುತಗೊಳಿಸಲು ಕಾರಣರಾಗಿದ್ದರು.ನಿನ್ನೆ ರಾತ್ರಿ ಪೊಲೀಸ್ ವಶದಲ್ಲಿದ್ದ ವೇಳೆ ಸಾವನ್ನಪ್ಪಿದ್ದಾರೆ.

ಪಕ್ಷದ ಪಬ್ನಾ ಘಟಕದ ಸಾಂಸ್ಕೃತಿಕ ವ್ಯವಹಾರಗಳ ಕಾರ್ಯದರ್ಶಿ ಪ್ರೋಲೋಯ್ ಚಾಕಿ ಅವರನ್ನು ಡಿಸೆಂಬರ್ 16 ರಂದು ಪಬ್ನಾದ ದಿಲಾಲ್ಪುರದಲ್ಲಿರುವ ಅವರ ಮನೆಯಿಂದ ಪೊಲೀಸರು ಬಂಧಿಸಿ ನಂತರ ಬಂಧಿಸಿ ಪೊಲೀಸರು ಜೈಲಿಗೆ ಕಳಿಹಿಸಿದ್ದರು.
ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರು, ವಿಶೇಷವಾಗಿ ಹಿಂದೂಗಳು ಮತ್ತು ಅವಾಮಿ ಲೀಗ್‌ನೊಂದಿಗೆ ಹೊಂದಿಕೊಂಡ ಗುಂಪುಗಳು, ಪಕ್ಷಗಳು ಮತ್ತು ಸಂಸ್ಥೆಗಳ ವಿರುದ್ಧ ನಿರಂತರ ಹಿಂಸಾಚಾರದ ಹಿಡಿತದಲ್ಲಿರುವ ಸಮಯದಲ್ಲಿ ಪ್ರೋಲೋಯ್ ಚಾಕಿಯವರ ಸಾವು ಸಂಭವಿಸಿದೆ. ಇದರಿಂದ ಬಾಂಗ್ಲಾದೇಶದಲ್ಲಿರುವ ಹಿಂದೂ ಸಮುದಾಯದ ಮಂದಿಯಲ್ಲಿ ಮತ್ತಷ್ಟು ಆತಂಕ ಹೆಚ್ಚು ಮಾಡಿದೆ

ಡಿಸೆಂಬರ್ 18 ರಂದು ಮೈಮೆನ್ಸಿಂಗ್‌ನಲ್ಲಿ ದೀಪು ಚಂದ್ರ ದಾಸ್ ಅವರನ್ನು ಗುಂಪು ಗಲಭೆಯಿಂದ ಹತ್ಯೆ ಮಾಡಿದ ನಂತರ ಏಳು ಹಿಂದೂಗಳು ಸಾವನ್ನಪ್ಪಿದ್ದಾರೆ ಮತ್ತು ಅಲ್ಪಸಂಖ್ಯಾತರ ಆಸ್ತಿಗಳನ್ನು ಬೆಂಕಿ ಹಚ್ಚುವ ದುಷ್ಕರ್ಮಿಗಳು ಗುರಿಯಾಗಿಸಿಕೊಂಡಿದ್ದಾರೆ.
ಪಬ್ನಾ ಜೈಲಿನ ಸೂಪರಿಂಟೆಂಡೆಂಟ್ ಎಂಡಿ ಒಮರ್ ಫಾರುಕ್, ಪ್ರೋಲೋಯ್ ಮಧುಮೇಹ ಮತ್ತು ಹೃದ್ರೋಗ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು ಎಂದು ಹೇಳಿದ್ದಾರೆ. ದಿನದಿಂದ ದಿನಕ್ಕೆ ಹಿಂದೂ ಕಾರ್ಯಕರ್ತರನ್ನು ಗುರಿಯಾಗಿಸಿಕೊಂಡು ನಡೆಸುತ್ತಿರುವ ದಾಳಿಯ ಹಿನ್ನೆಲೆಯಲ್ಲಿ ಬಾಂಗ್ಲಾದೇಶದಲ್ಲಿ ಇರುವ ಹಿಂದೂ ಕಾರ್ಯಕರ್ತರಿಗೆ ಸೂಕ್ತ ರಕ್ಷಣೆ ಒದಗಿಸುವಂತೆ ಆಗ್ರಹ ಕೇಳಿಬಂದಿದೆ.

# ಜ.17 ವಂದೇಭಾರತ್ ಸ್ಲೀಪರ್ ಕ್ಲಾಸ್ ರೈಲು ಲೋಕಾರ್ಪಣೆ



**ನವದೆಹಲಿ, ಜ.13 :** ಅಸ್ಸಾಂನ ಗುವಾಹಟಿ ಮತ್ತು ಪಶ್ಚಿಮ ಬಂಗಾಳದ ಹೌರಾ ನಡುವೆ ಸಂಚರಿಸಲಿರುವ ಭಾರತೀಯ ರೈಲ್ವೆಯ ಮೊದಲ ಸ್ಲೀಪರ್–ಕ್ಲಾಸ್ ವಂದೇ ಭಾರತ್ ರೈಲನ್ನು ಪ್ರಧಾನಿ ನರೇಂದ್ರ ಮೋದಿ ಶನಿವಾರ, ಜನವರಿ 17ರಂದು ಉದ್ಘಾಟಿಸಲಿದ್ದಾರೆ.
ಹೊಸ ರೈಲು ಭಾರತೀಯ ರೈಲ್ವೆ, ಅದರ ಪ್ರಯಾಣಿಕರು ಮತ್ತು ಇಡೀ ರಾಷ್ಟ್ರಕ್ಕೆ ಮಹತ್ವದ ಮೈಲಿಗಲ್ಲಾಗಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.
ಪಶ್ಚಿಮ ಬಂಗಾಳ ಬಿಜೆಪಿ ಅಧ್ಯಕ್ಷ ಸಾಮಿಕ್ ಭಟ್ಟಾಚಾರ್ಯ ಸೋಮವಾರ, ಪ್ರಧಾನಿ ರೈಲಿಗೆ ಹಸಿರು ನಿಶಾನೆ ತೋರಲಿದ್ದಾರೆ ಎಂದು ಹೇಳಿದ್ದಾರೆ. ಇದು ಪಶ್ಚಿಮ ಬಂಗಾಳದ ಉತ್ತರ ಜಿಲ್ಲೆಗಳಲ್ಲಿ ಸಂಪರ್ಕವನ್ನು ಗಮನಾರ್ಹವಾಗಿ ಹೆಚ್ಚಿಸಲಿದೆ.
ಭಾರತದ ಮೊದಲ ಸ್ಲೀಪರ್ ವಂದೇ ಭಾರತ್ ಬಗ್ಗೆ ಪ್ರಮುಖ ಅಂಶಗಳು:

ಹೌರಾ–ಗುವಾಹಟಿ ಸ್ಲೀಪರ್ ವಂದೇ ಭಾರತ್ ಅಸ್ಸಾಂನ ಕಾಮರೂಪ್ ಮೆಟ್ರೋಪಾಲಿಟನ್ ಮತ್ತು ಬೊಂಗೈಗಾಂವ್ ಮತ್ತು ಪಶ್ಚಿಮ ಬಂಗಾಳದ ಕೂಚ್‌ಬೆಹಾರ್, ಜಲ್ಪೈಗುರಿ, ಮಾಲ್ಡಾ, ಮುರ್ಷಿದಾಬಾದ್, ಪುರ್ಬಾ ಬರ್ಧಮಾನ್, ಹೂಗ್ಲಿ ಮತ್ತು ಹೌರಾ ಸೇರಿದಂತೆ ಎರಡು ರಾಜ್ಯಗಳ ಪ್ರಮುಖ ಜಿಲ್ಲೆಗಳನ್ನು ಸಂಪರ್ಕಿಸುತ್ತದೆ.
ಈ ರೈಲು 958 ಕಿಲೋಮೀಟರ್ ಹೌರಾ–ಕಾಮಾಕ್ಯ (ಗುವಾಹಟಿ) ಮಾರ್ಗದಲ್ಲಿ ಚಲಿಸಲಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.ಈ ರೈಲು 11 ಮೂರು ಹಂತದ ಹವಾನಿಯಂತ್ರಿತ ಬೋಗಿಗಳು, 4 ಎರಡು ಹಂತದ ಹವಾನಿಯಂತ್ರಿತ ಬೋಗಿಗಳು ಮತ್ತು 1 ಪ್ರಥಮ ದರ್ಜೆ ಹವಾನಿಯಂತ್ರಿತ ಬೋಗಿ ಸೇರಿದಂತೆ ಒಟ್ಟು 16 ಬೋಗಿಗಳನ್ನು ಹೊಂದಿರುತ್ತದೆ, ಒಟ್ಟು 823 ಪ್ರಯಾಣಿಕರ ಸಾಮರ್ಥ್ಯ ಹೊಂದಿದೆ.ವಂದೇ ಭಾರತ್ ಸ್ಲೀಪರ್ ರೈಲನ್ನು ಹೊಸ ವಿನ್ಯಾಸದ ನಿಯತಾಂಕಗಳು ಮತ್ತು ಸಸ್ಪೆನ್ಶನ್ ಜತೆಗೆ ಹೊಸದಾಗಿ ವಿನ್ಯಾಸಗೊಳಿಸಲಾದ ಬೋಗಿಗಳಿಂದ ಅಲಂಕರಿಸಲಾಗುವುದು. ಒಳಾಂಗಣವು ದಕ್ಷತಾಶಾಸ್ತ್ರದ ವಿನ್ಯಾಸವನ್ನು ಹೊಂದಿರುತ್ತದೆ. ಸುರಕ್ಷತೆ ಮತ್ತು ಭದ್ರತೆಗಾಗಿ ವಿಶೇಷ ನಿಯತಾಂಕಗಳನ್ನು ಜಾರಿಗೆ ತರಲಾಗುವುದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.
ವಂದೇ ಭಾರತ್ ಸ್ಲೀಪರ್ ರೈಲು ಪ್ರಯಾಣಿಕರು ಪ್ರದೇಶ–ನಿರ್ದಿಷ್ಟ ಪಾಕಶಾಲೆಯ ಕೊಡುಗೆಗಳನ್ನು ಆರಿಸಿಕೊಳ್ಳಲು ಸಾಧ್ಯವಾಗುತ್ತದೆ. ಕೋಲ್ಕತ್ತಾದಿಂದ ತನ್ನ ಪ್ರಯಾಣವನ್ನು ಪ್ರಾರಂಭಿಸುವಾಗ ಗುವಾಹಟಿಯಿಂದ ಹುಟ್ಟಿದ ಅಸ್ಸಾಮಿ ಪಾಕಪದ್ಧತಿ ಮತ್ತು ಸಾಂಪ್ರದಾಯಿಕ ಬಂಗಾಳಿ ಭಕ್ಷ್ಯಗಳನ್ನು ಅಡುಗೆ ನೀಡಲಿದೆ.
ಇವುಗಳಲ್ಲದೆ, ರೈಲು ಸುಗಮ ಚಲನೆಗಾಗಿ ವೆಸ್ಟಿಬ್ಯೂಲ್‌ಗಳೊಂದಿಗೆ ಸ್ವಯಂಚಾಲಿತ ಬಾಗಿಲುಗಳು, ಕವಚ್ ಆಂಟಿ–ಕೊಲಿಷನ್ ತಂತ್ರಜ್ಞಾನದಂತಹ ಇತರ ವೈಶಿಷ್ಟ್ಯಗಳನ್ನು ಸಹ ನೀಡುತ್ತದೆ; ತುರ್ತು ಟಾಕ್–ಬ್ಯಾಕ್ ವ್ಯವಸ್ಥೆ, ದೈಹಿಕ ವಿಕಲಚೇತನರಿಗೆ ವಿಶೇಷ ವ್ಯವಸ್ಥೆಗಳು ಮತ್ತು ಎಲ್ಲಾ ಬೋಗಿಗಳಲ್ಲಿ ಸಿಸಿಟಿವಿಗಳು ಇತ್ಯಾದಿ.

# ತಾಂತ್ರಿಕ ದೋಷ: ವಿಮಾನ ಹಾರಾಟ ರದ್ದು

**ಪುಣೆ,ಜ.13–**ಪುಣೆಯಿಂದ ಬೆಂಗಳೂರಿಗೆ ಹೊರಟಿದ್ದ ಆಕಾಶ ಏರ್ ವಿಮಾನದ ಬೋಯಿಂಗ್ 737 ಮ್ಯಾಕ್ಸ್ ವಿಮಾನದಲ್ಲಿ ಕೊನೆಯ ಕ್ಷಣದಲ್ಲಿ ತಾಂತ್ರಿಕ ದೋಷ ಪತ್ತೆಯಾದ ನಂತರ ಪ್ರಯಾಣಿಕರನ್ನು ಮಂಗಳವಾರ ಕೆಳಗಿಳಿಸಲಾಯಿತು ಎಂದು ಮೂಲಗಳು ತಿಳಿಸಿವೆ.
ಮಂಗಳವಾರ ಬೆಳಿಗ್ಗೆ 8.50 ಕ್ಕೆ ವಿಮಾನ ಹೊರಡಬೇಕಿತ್ತು ಮತ್ತು ಪ್ರಯಾಣಿಕರು ಬೆಳಿಗ್ಗೆ 8.10 ಕ್ಕೆ ಹತ್ತಬೇಕಿತ್ತು. ಆದರೆ ವಿಮಾನ ಹೊರಡಲು ಸಿದ್ಧವಾದಂತೆಯೇ, ತಾಂತ್ರಿಕ ದೋಷ ಕಾಣಿಸಿಕೊಂಡು ಟೇಕ್ ಆಫ್ ಸ್ಥಗಿತಗೊಳಿಸಬೇಕಾಯಿತು.
ಅಸಮರ್ಪಕ ಕಾರ್ಯದಿಂದಾಗಿ ಪ್ರಯಾಣಿಕರು ಸುಮಾರು ಒಂದೂವರೆ ಗಂಟೆಗಳ ಕಾಲ ವಿಮಾನದೊಳಗೆ ಇದ್ದರು, ಆದರೆ ಸಮಸ್ಯೆಯನ್ನು ಸರಿಪಡಿಸಲು ಸಾಧ್ಯವಾಗದಿದ್ದಾಗ, ಅವರನ್ನು ಅಂತಿಮವಾಗಿ ಕೆಳಗಿಳಿಸಲಾಯಿತು. ವಿಮಾನದಲ್ಲಿದ್ದ ಪ್ರಯಾಣಿಕರೊಬ್ಬರು, "ಜನವರಿ 13 ರಂದು ಪುಣೆಯಿಂದ ಬೆಂಗಳೂರಿಗೆ ಹೊರಟಿದ್ದ ಅಕಾಸಾ ಏರ್‌ನ ಕ್ಯೂಪಿ1312 ವಿಮಾನವು ಪುಣೆ ವಿಮಾನ ನಿಲ್ದಾಣದಲ್ಲಿ ಸಿಲುಕಿಕೊಂಡಿದೆ. ಪ್ರಯಾಣಿಕರು ವಿಮಾನ ಹತ್ತಿದ್ದರು ಮತ್ತು ಟೇಕ್‌ಆಫ್‌ಗೆ ತಯಾರಿ ನಡೆಸುತ್ತಿದ್ದಾಗ, ಕೊನೆಯ ಕ್ಷಣದಲ್ಲಿ ವಿಮಾನವು ತಾಂತ್ರಿಕ ಸಮಸ್ಯೆಯನ್ನು ಅನುಭವಿಸಿತು. ನಂತರ ಎಲ್ಲಾ ಪ್ರಯಾಣಿಕರನ್ನು ಕೆಳಗಿಳಿಸಲಾಯಿತು" ಎಂದು ಪ್ರಯಾಣಿಕ ಹೇಳಿದ್ದಾರೆ. ವಿಮಾನ ಪುನರಾರಂಭಕ್ಕಾಗಿ ಪರಿಷ್ಕೃತ ವೇಳಾಪಟ್ಟಿಯನ್ನು ಘೋಷಿಸಲಾಗಿಲ್ಲ ಎಂದು ಪ್ರಯಾಣಿಕ ಹೇಳಿದ್ದಾರೆ. ಈ ವಿಷಯದ ಬಗ್ಗೆ ಅಕಾಸಾ ಏರ್ ಇನ್ನೂ ಹೇಳಿಕೆ ನೀಡಿಲ್ಲ.
ಪ್ರಯಾಣಿಕರೊಬ್ಬರ ಪ್ರಕಾರ, ವಿಮಾನವು ಬೆಳಿಗ್ಗೆ 8.50 ಕ್ಕೆ ಪುಣೆಯಿಂದ ಹೊರಡಬೇಕಿತ್ತು ಮತ್ತು ಬೋರ್ಡಿಂಗ್ ಪ್ರಕ್ರಿಯೆಯು ಬೆಳಿಗ್ಗೆ 8.10 ರ ಸುಮಾರಿಗೆ ಪ್ರಾರಂಭವಾಯಿತು.
ಹೊಸ ವಿಮಾನದ ಸಮಯವನ್ನು ಇನ್ನೂ ಘೋಷಿಸಲಾಗಿಲ್ಲ ಎಂದು ಪ್ರಯಾಣಿಕ ಹೇಳಿದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE